ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Post Office 560001, Posting Day 12th. Reg. No. RNP/BGS/2094/20011-13 Licence to post RNI No.: KARBILO 2004/18001

# ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ



## ಕ್ರಿಯಾ ಶೀಲ ಯುವ ಸಹಕಾರಿ
## ಶ್ರೀ ಎನ್.ರಮೇಶ್




ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರಿ ಸಂಘಗಳ ಪಾತ್ರ ಅತ್ಯಂತ ಮಹತ್ವದೆಂದು ನಂಬಿರುವ ಶ್ರೀಯುತ ಎನ್. ರಮೇಶರವರು ವೃತ್ತಿಯಲ್ಲಿ ವಕೀಲರು ಪ್ರವೃತ್ತಿಯಲ್ಲಿ ಉತ್ತಮ ಸಹಕಾರಿ ಯುವ ಸಹಕಾರಿ ನಾಯಕರಾಗಿ ಉತ್ಸಾಹ ಶೀಲರಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ವ್ಯವಸಾಯ ಕುಟುಂಬದ ಶ್ರೀ ನಾಗಪ್ಪರವರ ಪುತ್ರರಾಗಿ ದಿನಾಂಕ 25–9–1972 ರಂದು ಚನ್ನಹಳ್ಳಿಯಲ್ಲಿ ಜನಿಸಿದ್ದಾರೆ. ಶ್ರೀಯುತರು ಪ್ರಾಥಮಿಕ ಶಿಕ್ಷಣವನ್ನು ಚನ್ನಹಳ್ಳಿಯಲ್ಲಿ ಪೂರೈಸಿ, ಬೆಟ್ಟಕಲಿಯಲ್ಲಿ ಪೌಢ ಶಿಕ್ಷಣವನ್ನು ಮುಗಿಸಿ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದು ವಿವೇಕಾನಂದ ಕಾಲೇಜಿನ ಲಾ– ವಿಭಾಗದಲ್ಲಿ ಕಾನೂನು ಪದವಿ ಗಳಿಸಿ ನಂತರ ಸ್ನಾತಕೋತ್ತರ ಪಧವಿ ಯನ್ನು ಮೈಸೂರು ವಿಶ್ವವಿದ್ಯಾಲಯದಿಂದ ಪಡೆದು ನಂತರ ಮಾನವ ಸಂಪನ್ಮೂಲ ಅಭಿವೃದ್ಧಿ ನಿರ್ವಹಣೆ ವಿಷಯದಲ್ಲಿ ಡಿಪ್ಲೋಮೊ ಪಡೆದಿದ್ದಾರೆ. ವಕೀಲ ವೃತ್ತಿಯನ್ನು ಆಯ್ಕೆ ಮಾಡುತ್ತಲೇ ಒಬ್ಬ ಉತ್ತಮ ಸಂಪನ್ಮೂಲ ವ್ಯಕ್ತಿಯಾಗಿ ಹಾಗೂ ಉತ್ತಮ ಸಹಕಾರಿಯಾಗವ ಹೆಬ್ಬಯಕೆ ಹೊಂದಿರುವ ಶ್ರೀಯುತರು ಗಣಪತಿ ಸೌಹಾರ್ದ ಕ್ರೆಡಿಟ್ ಸಹಕಾರಿಯ ನಿರ್ದೇಶಕರಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರತಿನಿಧಿಯಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಶ್ರೀಯುತರು ವಕೀಲಿ ವೃತ್ತಿ ಸಹಕಾರಿ ಕ್ಷೇತ್ರಗಳಲ್ಲದೇ ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಬೆಂಗಳೂರು ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಬಿಜೆಪಿ ಕೋ– ಆಪರೇಟಿವ್‌ನಲ್ಲಿ ಜಿಲ್ಲಾ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಹಸ್ತ ಕ್ಷೇಪ ಕೂಡದು ಸರ್ಕಾರಕ್ಕಿಂತ ಸಹಕಾರ ಕ್ಷೇತ್ರದ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಮಾಡಬಹುದಾಗಿದೆ. ಸಾಮಾನ್ಯ ಜನರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬಹುದಾಗಿದೆ. ಆದ್ದರಿಂದ ಸಹಕಾರ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಬೆಳೆಯಬೇಕು. ಯುವಕರು ಹೆಚ್ಚಾಗಿ ಈ ಕ್ಷೇತ್ರದಲ್ಲಿ ಆಸಕ್ತಿ ವಹಿಸಿ ನಿಸ್ವಾರ್ಥದಿಂದ ಕಾರ್ಯನಿರ್ವಹಿಸಬೇಕೆಂದು ಅಭಿಪ್ರಾಯದವರಾಗಿದ್ದಾರೆ. ಯುವಕರು ನಾಯಕ್ವವನ್ನು ರೂಢಿಸಿಕೋಳ್ಳಬೇಕು ನಾಯಕರಾಗಿ ಬೆಳೆಯಬೇಕೇ ವಿನಃ ಹಿಂಬಾಲಕರಾಗಿರಬಾರದೆಂದು ಆಶಿಸುತ್ತಾರೆ.

## ಅನೇಕ ಸಹಕಾರಿ ಸಂಸ್ಥೆಗಳ ಸ್ಥಾಪನೆಯ ಸಹಕಾರಿ ಧುರೀಣ
## ಶ್ರೀ ಬಿ.ಶಿವರುದ್ರಪ್ಪ



ಸಹಕಾರಿ ಕ್ಷೇತ್ರದಲ್ಲಿ 30 ವರ್ಷಗಳ ಅನನ್ಯ ಅನುಭವವನ್ನು ವಿವಿಧ ಸ್ಥಾನಮಾನಗಳಲ್ಲಿ ಸೇವೆ ಸಲ್ಲಿಸುತ್ತಾ ಬಂದಿರುವ ಶ್ರೀಯುತರು, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಹಾಸನದ ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿಯಮಿದಿಂದ ಹಾಸನ ಜಿಲ್ಲಾ ಪ್ರತಿನಿಧಿಯಾಗಿ ಚುನಾಯಿತರಾಗಿರುತ್ತಾರೆ.

ಶ್ರೀಯುತರು ಮೂಲತಃ ಕೃಷಿ ಕುಟುಂಬದಿಂದ ಬಂದವರಾಗಿದ್ದು, 15–03–1951ರಲ್ಲಿ ಬೇಲೂರು ತಾಲ್ಲೂಕು, ಬಲ್ಲೇನಹಳ್ಳಿ ಗ್ರಾಮದಲ್ಲಿ ಜನಿಸಿದ ಇವರು ಪ್ರಾಥಮಿಕ ಹಾಗೂ ಫ್ರೌಢ ಶಿಕ್ಷಣವನ್ನು ಸ್ವಗ್ರಾಮದಲ್ಲೆ ಮುಗಿಸಿ, ಬಿ.ಎಸ್ಸಿ., ಪದವಿ ಶಿಕ್ಷಣವನ್ನು ತುಮಕೂರಿನಲ್ಲಿ ಪೂರೈಸಿದ ಬಳಿಕ ಗಣಿತದಲ್ಲಿ ಸ್ನಾತಕೋತ್ತರ ಪದವಿಯನ್ನು (ಎಂ.ಎಸ್ಸಿ.,) ಮೈಸೂರಿನ ಮಾನಸಗಂಗೋತ್ರಿಯಲ್ಲಿ ಮುಗಿಸಿರುತ್ತಾರೆ.

ಸ್ವಗ್ರಾಮದಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿದ್ದ ತಂದೆ ಶ್ರೀ ಬಸವೇಗೌಡರ ಮಾರ್ಗದರ್ಶನ, ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಪ್ರಮುಖ ಪ್ರೇರಣೆಯಾಗಿರುತ್ತದೆ.

ಶ್ರೀಯುತರು ಸೇವೆ ಸಲ್ಲಿಸುತ್ತಿರುವ ಸಹಕಾರಿ ಸಂಸ್ಥೆಗಳು ಈ ಕೆಳಗಿನಂತಿವೆ.

* ನಿರ್ದೇಶಕರು – ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು
* ಅಧ್ಯಕ್ಷರು – ಸಣ್ಣಕೈಗಾರಿಕೆಗಳ ವಿವಿದೋದ್ದೇಶ ಸಹಕಾರ ಸಂಘ ನಿ., ಹಾಸನ
* ಅಧ್ಯಕ್ಷರು – ಸಣ್ಣ ಕೈಗಾಗಿಕೋದ್ಯಮಿಗಳ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ
* ಅಧ್ಯಕ್ಷರು – ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿಯಮಿತ, ಹಾಸನ
* ಅಧ್ಯಕ್ಷರು – ಶ್ರೀ ಪುಷ್ಪಗಿರಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ
* ನಿರ್ದೇಶಕರು – ಶ್ರೀ ನೊಳಂಬ ಸೌಹಾರ್ದ ವಿವಿದೋದ್ದೇಶ ಸಹಕಾರಿ ಸಂಘ ನಿ., ಬೆಂಗಳೂರು.

### ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ–1. ದೂ. 0831–2401551
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಡಿ.2, 1ನೇ ಮಹಡಿ, ರತಿ ಬಿಲ್ಡಿಂಗ್, ಖೂಬ ಪ್ಲಾಟ್, ಗುಲ್ಬರ್ಗಾ–2

ಇವರಿಂದ ಪ್ರಕಟಿತ :
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
(ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 560010.
web : www.souharda.coop, E-mail : souharada@souharada.coop
**ದೂರವಾಣಿ ಸಂಖ್ಯೆಗಳು :**
23378375/76/77/78/79/80 ಹಾಗೂ 23474408, 23573291
ಸಂಪಾದಕ, ಪ್ರಕಾಶಕ: **ಶರಣಗೌಡ ಜಿ. ಪಾಟೀಲ,**
ಸಂಚಿಕೆ ಸಿದ್ಧತೆ **ವಿ.ಜೆ.ಕಾರಕೂನ**
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

ದಶಮಾನೋತ್ಸವ ವರ್ಷ

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ನವೆಂಬರ್ 14 ಮಕ್ಕಳ ದಿನಾಚರಣೆ



ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಪುಟ 8 * ಸಂಚಿಕೆ 11 * ನವೆಂಬರ್ 2011 * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/- * ಬೆಲೆ ರೂ. 5/-




## ಕನ್ನಡ ರಾಜ್ಯೋತ್ಸವ ಹಾಗೂ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ

ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ ....2
ಸೌಹಾರ್ದ ಸಹಕಾರಿಗಳ ಸಮಾಚಾರಗಳು ....3,4,5,6,7
ಲೇಖನ....7
ತರಬೇತಿ ಕಾರ್ಯಾಗಾರ....8,9
ಪ್ರಾಮಾಣಿಕತೆಯ ಪ್ರತಿಫಲ....10
ಲೇಖನ ....11,12,13,14,15
ನಿರ್ದೇಶಕರ ಪರಿಚಯ ....16

ಸೌಹಾರ್ದ ಸಹಕಾರಿಗಳ ಸಂಖ್ಯೆ : 1822 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 410

# ಆರ್ಥಿಕ ಚಟುವಟಿಕೆಗಳ ವಿಸ್ತರಣೆಗೆ ಆದ್ಯತೆ ಅಗತ್ಯ



> "1905ರ ಮೇ 8ರಂದು ದೇಶದ ಪ್ರಪ್ರಥಮ ಕೃಷಿ ಪತ್ತಿನ ಸಹಕಾರಿಯನ್ನು ಕರ್ನಾಟಕ ರಾಜ್ಯದ ಅವಿಭಾಜಿತ ಧಾರವಾಡ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಪ್ರಾರಂಭಿಸಲಾಯಿತು. ಸಹಕಾರ ತತ್ವಗಳಲ್ಲಿ ಅಪಾರ ವಿಶ್ವಾಸವನ್ನು ಹೊಂದಿದ್ದ ರಾಷ್ಟ್ರಪಿತ ಮಾಹಾತ್ಮ ಗಾಂಧೀಜಿಯವರು "ಆರ್ಥಿಕ ಸ್ವಾತಂತ್ರಕ್ಕೆ ಸಹಕಾರವೇ ಹೆಬ್ಬಾಗಿಲು" ಎಂದು ಹೇಳಿದರು. ದಿ.ನೆಹರೂರವರು ಈ ದೇಶವನ್ನು ಸಹಕಾರಿ ಕಾಮನ್‌ವೆಲ್ತ್ ರಾಷ್ಟ್ರವನ್ನಾಗಿಸುವ ಕನಸನ್ನು ಕಂಡಿದ್ದರು."

ಆತ್ಮೀಯ ಸಹಕಾರಿ ಬಂಧುಗಳೆ,

1991ರಲ್ಲಿ ಈ ದೇಶದಲ್ಲಿ ನೂತನ ಅರ್ಥವ್ಯವಸ್ಥೆಯು ಜಾರಿಗೆ ಬಂದಾಗ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ಹಾವಳಿಯಲ್ಲಿ ಸಹಕಾರಿ ಕ್ಷೇತ್ರ ಎಲ್ಲಿ ಕಮರಿ ಹೋಗುತ್ತೊ ಎಂಬ ಭಯವಿತ್ತು. ಆದರೆ ಸಹಕಾರಿ ಕ್ಷೇತದ ಭದ್ರ ಬುನಾದಿ ಹಾಗಾಗಲು ಅವಕಾಶ ಕೊಡಲಿಲ್ಲ. ಸಹಕಾರಿಗಳು ಹಾಕಿಕೊಟ್ಟ ಭದ್ರಬುನಾದಿಯ ಆಧಾರದ ಮೇಲೆ ಸಹಕಾರಿಗಳು ಕಾರ್ಯನಿರ್ವಹಿಸುತ್ತ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಾ ಈ ದೇಶದ ಜನರ ಜೀವನ ವ್ಯವಸ್ಥೆಯಾಗಿ ರೂಪುಗೊಂಡು ಪ್ರಬಲ ಪೈಪೂಟಿಯಲ್ಲಿಯೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾ ಬಂದಿರುವುದು ಹೆಮ್ಮೆಯ ವಿಷಯ.

ಈ ದೇಶದಲ್ಲಿ ಸಹಕಾರ ಕ್ಷೇತ್ರ 1904ರ ಮಾರ್ಚ್ 25ರಂದು ಸಹಕಾರಿ ಕಾನೂನಿನ ಮೂಲಕ ಪ್ರಾರಂಭವಾಯಿತು. 1905ರ ಮೇ 8ರಂದು ದೇಶದ ಪ್ರಪ್ರಥಮ ಕೃಷಿ ಪತ್ತಿನ ಸಹಕಾರಿಯನ್ನು ಕರ್ನಾಟಕ ರಾಜ್ಯದ ಅವಿಭಾಜಿತ ಧಾರವಾಡ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಪ್ರಾರಂಭಿಸಲಾಯಿತು. ಸಹಕಾರ ತತ್ವಗಳಲ್ಲಿ ಅಪಾರ ವಿಶ್ವಾಸವನ್ನು ಹೊಂದಿದ್ದ ರಾಷ್ಟ್ರಪಿತ ಮಾಹಾತ್ಮ ಗಾಂಧೀಜಿಯವರು "ಆರ್ಥಿಕ ಸ್ವಾತಂತ್ರಕ್ಕೆ ಸಹಕಾರವೇ ಹೆಬ್ಬಾಗಿಲು" ಎಂದು ಹೇಳಿದರು. ದಿ.ನೆಹರೂರವರು ಈ ದೇಶವನ್ನು ಸಹಕಾರಿ ಕಾಮನ್‌ವೆಲ್ತ್ ರಾಷ್ಟ್ರವನ್ನಾಗಿಸುವ ಕನಸನ್ನು ಕಂಡಿದ್ದರು. ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಸರಕಾರದಿಂದ ಸಾಕಷ್ಟು ನೀಡುತ್ತಾ ಬಂದಿದ್ದರು.

ಆದರೆ ಸ್ವಾತಂತ್ರ್ಯಾನಂತರದ ಅನೇಕ ವರದಿಗಳನ್ನು ಅಧ್ಯಯನ ಮಾಡಿದಾಗ ಹಾಗೂ ವಿಶ್ಲೇಷಣೆ ಮಾಡಿದಾಗ ಸಹಕಾರ ಕ್ಷೇತ್ರ ನಿರೀಕ್ಷಿಸಿದ ಪ್ರಗತಿಯನ್ನು ಸಾಧಿಸದಿರುವುದು ಆದರೆ ಸಹಕಾರಿ ಕ್ಷೇತ್ರದ ಮೂಲಕವೇ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯ ಹಾಗೂ ಇದಕ್ಕಾಗಿ ಸಹಕಾರಿ ಕ್ಷೇತ್ರವನ್ನು ಬಲಪಡಿಸುವುದು ಅಗತ್ಯವೆಂದು ಅಭಿಪ್ರಾಯಪಡಲಾಗಿದೆ.

ಸಹಕಾರಿ ಕ್ಷೇತ್ರವನ್ನು ಬಲಪಡಿಸಲೇಬೇಕು. ಸಹಕಾರಿ ಕ್ಷೇತ್ರ ಕೇವಲ ಸೇವಾ ಕ್ಷೇತ್ರವಾಗಿ ಉಳಿಯಬಾರದು ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಲೇಬೇಕು. ಪ್ರತಿದಿನ ಬದಲಾಗುತ್ತಿರುವ ಆರ್ಥಿಕ ಚಟುವಟಿಗಳ ಹಿನ್ನೆಲೆಯಲ್ಲಿ ಸದಸ್ಯರಿಗೆ ಸಾರ್ವಜನಿಕರಿಗೆ ಅನೇಕ ಸೌಲಭ್ಯಗಳನ್ನು ಒದಗಿಸುವಂತಹ ಅಗತ್ಯವಾದ ಯೋಜನೆಗಳನ್ನು ಸಹಕಾರಿಗಳು ಹಮ್ಮಿಕೊಳ್ಳಬೇಕಾಗುತ್ತದೆ. ಕೇವಲ ಠೇವಣಿಗಳನ್ನು ಸಂಗ್ರಹಿಸಿದಲ್ಲಿ ಸಾಲಕೊಡುವ ವ್ಯವಸ್ಥೆಸಾಲದು. ಇದಕ್ಕೆ ಪೂರಕವಾಗುವ ಹೆಚ್ಚಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಕಡಿಮೆ ಬಡ್ಡಿಯಲ್ಲಿ ಅಥವಾ ಬಡ್ಡಿಯನ್ನು ನೀಡದೇ ಬಂಡವಾಳವನ್ನು ಕ್ರೋಡೀಕರಿಸುವ ಅನೇಕ ವಿಧಾನಗಳಿವೆ. ರಾಜ್ಯದ ಅನೇಕ ಸೌಹಾರ್ದ ಸಹಕಾರಿಗಳು ಬಹುವಿಧವಾದ ಚಟುವಟಿಕೆಗಳನ್ನು ಹಮ್ಮಿಕೊಂಡಿವೆ. ವಾಣಿಜ್ಯ ಬ್ಯಾಂಕುಗಳಲ್ಲಿ ಈ ರೀತಿಯ ಹಣಕಾಸಿನ ಸಂಗ್ರಹಣೆಯ ಪ್ರಮಾಣ ಅಂದಾಜು 45% ಇದ್ದರೆ ಸಹಕಾರಿ ಸಂಸ್ಥೆಗಳಲ್ಲಿ ಕೇವಲ 2% ರಿಂದ 5% ಇರುವುದು ಸಹಕಾರಿಗಳು ಗಂಭೀರವಾಗಿ ಪರಿಗಣಿಸಬೇಕು. ಈ ರೀತಿಯ ಬಡ್ಡಿಯೇತರ ಆದಾಯವನ್ನು 40% ರಿಂದ 50% ವರೆಗೆ ಹೆಚ್ಚಿಸಿಕೊಂಡಲ್ಲಿ ಸಹಕಾರಿಗಳ ಹಣಕಾಸಿನ ಸ್ಥಿತಿಗತಿಗಳು ಭದ್ರವಾಗುವುದರ ಜೊತೆಗೆ ಸದಸ್ಯರ ವಿಶ್ವಾಸಾರ್ಹತೆ ಹೆಚ್ಚುವುದರಲ್ಲಿ ಸಹಕಾರಿಯಾಗುತ್ತದೆ.

ಸಹಕಾರಿಗಳ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳು ತಮ್ಮ ಸಹಕಾರಿಯ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ತಮ್ಮ ಸಹಕಾರಿಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದಕ್ಕಾಗಿ ಕೆಲವು ಉತ್ತಮ ಸಹಕಾರಿಗಳ ಅಧ್ಯಯನ ಮಾಡುವುದು ಅವಶ್ಯಕ. ಸಂಯುಕ್ತ ಸಹಕಾರಿಯ ಹಾಗೂ ಬೇರೆ ಯಾವುದೆ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಮಾಹಿತಿ ಸಂಗ್ರಹಿಸುವುದು ಸಹ ಅಗತ್ಯ.

ಸಹಕಾರಿಯ ವಿಶ್ವಾಸಾರ್ಹತೆ ಹೆಚ್ಚಿದಲ್ಲಿ ಸಹಕಾರಿಗಳು ಯಾವುದೇ ರೀತಿಯ ಬಾಹ್ಯ ಪೈಪೋಟಿಯನ್ನು ಎದುರಿಸಲು ಸಮರ್ಥವಾಗುತ್ತವೆ. ಈ ನಿಟ್ಟಿನಲ್ಲಿ ನಿಮ್ಮ ಪ್ರಯತ್ನಗಳು ಪರಿಣಾಮಕಾರಿಯಾಗಿರಲಿ ಎಂದು ಸೌಹಾರ್ದ ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕನ್ನಡ ರಾಜ್ಯೋತ್ಸವ ಹಾಗೂ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು.

**ಎಸ್.ಆರ್. ಸತೀಶಚಂದ್ರ**
ಅಧ್ಯಕ್ಷರು

ಋ) ಗೃಹ ನಿರ್ಮಾಣ ಸಾಲ
ಎ) ನೌಕರರ ಪಗಾರ ಪತ್ರದ ಮೇಲೆ ಸಾಲ
ಏ) ಮನೆ ಒತ್ತಿ ಸಾಲ
ಐ) ಯಂತ್ರೋಪಕರಣಗಳ ಖರಿದಿ ಸಾಲ

ದೀರ್ಘಾವಧಿ ಸಾಲಗಳು– 5 ವರ್ಷ ಮೇಲ್ಪಟ್ಟ ಮರುಪಾವತಿ ಅವಧಿ:

ಅ) ಗೃಹ ನಿರ್ಮಾಣ ಸಾಲ ಆ) ಮನೆ ಒತ್ತಿ ಸಾಲ ಇ) ದೊಡ್ಡ ಪ್ರಮಾಣದ ವಾಹನ ಸಾಲ ಈ) ಮನೆ ಖರಿದಿ ಸಾಲ ಉ) ಶಿಕ್ಷಣ ಸಾಲ ಊ) ಮನೆ ರಿಪೇರಿ ಸಾಲ ಋ) ಯಂತ್ರೋಪಕರಣಗಳ ಖರಿದಿ ಸಾಲ ಇತ್ಯಾದಿ

ಸಹಕಾರಿಯು ಯಾವ ತರಹದ ಸಾಲಗಳಿಗೆ ಮಂಜೂರಿಯಲ್ಲಿ ಹೆಚ್ಚು ಪ್ರಾಧಾನ್ಯ ಕೊಡಬೇಕು?

ಜಾಮೀನು ಹಾಗೂ ಭದ್ರತೆ ಮೇಲೆ ಎಷ್ಟೆಷ್ಟು ಸಾಲ ಕೊಡಬೇಕು.

ಸಹಕಾರಿಯು ಹೊಂದಿದ ಠೇವುಗಳು, ಶೇರು ಬಂಡವಾಳ ಹಾಗೂ ಇತರ ನಿಧಿಗಳ ಅನುಸಾರ ಸಾಲ ಕೊಡುವ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಅದರಲ್ಲಿ ಸಹಕಾರಿ ಹೊಂದಿದ ಠೇವುಗಳ ಅವಧಿಗಳನ್ನು ಗಣನೆಗೆ ತೆಗೆದುಕೊಂಡು ಯಾವ ಸಾಲಗಳನ್ನು ಎಷ್ಟು ಅವಧಿಗೆ ಕೊಡಬೇಕು ಹಾಗೂ ಜಾಮೀನು ಸಾಲಗಳನ್ನು ಎಷ್ಟು ಕೊಡಬೇಕು ಎಂಬುದನ್ನು ಅಭ್ಯಸಿಸಬೇಕಾಗುವುದು. ಸಹಕಾರಿಯ ಕಾಯ್ದಿಟ್ಟ ನಿಧಿಯನ್ನು ಹೊರಗಡೆ ತೊಡಗಿಸಬೇಕಾಗುತ್ತದೆ. ತಾನು ಹೊಂದಿದ ಶೇರು ಬಂಡವಾಳ, ಇತರ ನಿಧಿ ರಕ್ಕಮುಗಳ ಹಣವನ್ನು ಸಹಕಾರಿಯಲ್ಲಿ ಫರ್ನಿಚರ, ಕಂಪ್ಯೂಟರ್, ಕಬ್ಬಿನ ಮತ್ತು ಇತರ ಸಲಕರಣೆಗಳನ್ನು ಖರಿದಿಸಲು ಹಾಗೂ ಬಾಡಿಗೆ ಇಮಾರತಿ ಇದ್ದಲ್ಲಿ ಅದನ್ನು ಪಡೆಯುವುದಕ್ಕಾಗಿ ಠೇವುಗಳನ್ನು ವಿನಿಯೋಗಿಸಬೇಕಾಗುತ್ತದೆ. ಅದಲ್ಲದೇ ಸಹಕಾರಿಯು ಸ್ವಂತ ಕಟ್ಟಡ ಹೊಂದಿದ್ದಲ್ಲಿ ಬಹಳಷ್ಟು ಹಣ ಕಟ್ಟಡ ಖರಿದಿ/ನಿರ್ಮಾಣಕ್ಕೆ ವ್ಯಯವಾಗಿರುತ್ತದೆ. ಇವುಗಳನ್ನು ನೋಡಿದರೆ ಸ್ವಂತ ಬಂಡವಾಳದಲ್ಲಿಯ ಕೆಲವು ಭಾಗ ರಕ್ಕಮು ಸಾಲಗಳನ್ನು ಕೊಡಲು ಉಪಯುಕ್ತವಾಗುತ್ತದೆ. ಸಹಕಾರಿಯು ಸದಸ್ಯರಿಗೆ ಸಾಲ ಕೊಡಲು ಬಹುಭಾಗ ಠೇವು ಸಂಗ್ರಹಣೆಗಳ ಮೇಲೆ ಅವಲಂಬಿಸಬೇಕಾಗುತ್ತದೆ. ಸಹಕಾರಿಯು ಹೊಂದಿದ ಠೇವುಗಳ ಮೇಲೆ 20 ಪ್ರತಿಶತ ಹಣವನ್ನು ಸಂಯುಕ್ತ ಸಹಕಾರಿಯ ಪರಿಪತ್ರದ ಪ್ರಕಾರ ದ್ರವ್ಯಾಸ್ಥಿ ಇಡಲು ತೊಡಗಿಸಬೇಕಾಗುತ್ತದೆ. ಹೀಗಾಗಿ ಠೇವಿನ ಉಳಿದ 80 ಪ್ರತಿಶತ ಹಣವನ್ನು ಅದರ ಜೊತೆಗೆ ಕೆಲವು ಭಾಗ ಶೇರು ಬಂಡವಾಳ ಹಾಗೂ ನಿಧಿಗಳ ರಕ್ಕಮುಗಳನ್ನು ಸಾಲ ಕೊಡಲು ವಿನಿಯೋಗಿಸಲು ಅವಕಾಶವಿರುತ್ತದೆ. ಇಂತಹ ಸನ್ನಿವೇಶದಲ್ಲಿ ಸಹಕಾರಿಯು ಸರ್ವಸಾಮಾನ್ಯವಾಗಿ ಯಾವ ತರಹದ ಠೇವುಗಳನ್ನು ಹೊಂದಿರುತ್ತದೆ. ಅವುಗಳು ಸಹಕಾರಿಯಲ್ಲಿ ಯಾವ ಅವಧಿಗೆ ಜಮೆ ಇರುತ್ತವೆ? ಅಂತಹ ಠೇವುಗಳನ್ನು ಹೇಗೆ ವಿನಿಯೋಗಿಸಬಹುದಾಗಿದೆ ಎಂಬುದನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇವುಗಳ ಬಗ್ಗೆ ವಿವರಗಳನ್ನು ಕೆಳಗಡೆ ಕೊಡಲಾಗಿದೆ.




**ಠೇವಣಿಗಳು:**

ಉಳಿತಾಯ ಠೇವುಗಳು, ಪಾವತಿ ಠೇವುಗಳಲ್ಲಿ 20 ರಷ್ಟು, ಪಿಗ್ಮಿ ಹಾಗೂ ರಿಕರಿಂಗ ಠೇವುಗಳಲ್ಲಿ 5 ಪ್ರತಿಶತ ಇರುತ್ತಿದ್ದು ಉಳಿದ 75 ಪ್ರತಿಶತ ಠೇವುಗಳು ಅವಧಿ ಠೇವುಗಳಾಗಿರುತ್ತವೆ.

ಅವಧಿ ಠೇವುಗಳು ಈ ಕೆಳಗಿನ ಅವಧಿಗಳಲ್ಲಿ ಹಾಗೂ ಪ್ರಮಾಣದಲ್ಲಿ ಜಮೆಯಾಗಿರುತ್ತವೆ.

| | |
|---|---|
| 1 ವರ್ಷದವರೆಗೆ | 30% |
| 2 ರಿಂದ 3 ವರ್ಷದವರೆಗೆ | 40% |
| 3 ರಿಂದ 5 ವರ್ಷಗಳ ಅವಧಿಗೆ | 20% |
| 5 ವರ್ಷ ಮೇಲ್ಪಟ್ಟ ಅವಧಿಗೆ | 10% |

ಮೂರು ವರ್ಷಗಳವರೆಗಿನ ಅವಧಿಗೆ 70% ಠೇವುಗಳು ಇದ್ದು ಮೇಲಿನ ಅವಧಿಗೆ 30% ಠೇವುಗಳು ಇರುತ್ತವೆ.

ಆದ್ದರಿಂದ ಸಹಕಾರಿಗಳು ತಮ್ಮ ನಿಧಿಯೊಳಗಿಂದ 60–70 ಪ್ರತಿಶತದಷ್ಟು ಹಣವನ್ನು 3–4 ವರ್ಷಗಳ ಅವಧಿಯ ವರೆಗೆ ಸಾಲ ಮುಂಗಡಗಳಲ್ಲಿ ಕೊಡಲು ಉಪಯೋಗಿಸಬಹುದಾಗಿದೆ.

ಜಾಮೀನು ಸಾಲಗಳನ್ನು ನಿರಾಂತಕವಾಗಿ ಮಂಜೂರು ಮಾಡುವುದು ಬಹಳ ಸುಲಭ ಮತ್ತು ಸರಳವಾದರೂ ಸದರಿ ಸಾಲ ವಸೂಲಿಯಲ್ಲಿ ಬಹಳಷ್ಟು ತೊಂದರೆಗಳು ಹಾಗೂ ಅಡಚಣೆಗಳು ಬರುವುದರಿಂದ ಅದರ ಮಂಜೂರಿ ಪ್ರಮಾಣ ಭದ್ರತೆ ಸಾಲಕ್ಕೆ 3:7 ಪ್ರತಿಶತ ಇಡುವುದು ಒಳ್ಳೆಯದು.

**ಸಾಲಗಳ ವ್ಯವಹಾರದ ತತ್ವಗಳು:**

ಸಹಕಾರಿಯು ತನ್ನ ಹಣಕಾಸಿನ ವ್ಯವಹಾರಗಳನ್ನು ಉತ್ತಮವಾಗಿ ನಿರ್ವಹಿಸಲು ಈ ಕೆಳಗೆ ವಿವರಿಸಿದ ಸಾಲ ಕೊಡುವ ತತ್ವಗಳನ್ನು ಅನುಸರಿಸಬೇಕಾಗುತ್ತದೆ.

1) **ಸುರಕ್ಷತೆ** (Safety):

* ಸಾಲಗಳನ್ನು ಉತ್ಪಾದಿಸಲಾಗಿ ಹಾಗೂ ನಿಯಮಿತವಾಗಿ ಉತ್ಪನ್ನ ಬರುವ ಉದ್ದೇಶಗಳಿಗೆ ಮಂಜೂರಿ ಮಾಡಿದಲ್ಲಿ ಸಾಲ ಮರುಪಾವತಿಯು ಸಾಧ್ಯ. (Not to sanction for unproductive & speculative purpose)

* ಪ್ರಾಮಾಣಿಕ, ವ್ಯವಹಾರಿಕ, ಅನುಭವಿಕ ಸದಸ್ಯನು ಉತ್ತಮ ಉತ್ಪನ್ನ ಗಳಿಸುವ ಸಾಮರ್ಥ್ಯವುಳ್ಳ ಸದಸ್ಯರಿಗೆ ಉತ್ತಮ ಉದ್ದೇಶಕ್ಕೆ ಸಾಲ ಪಡೆದಿದ್ದಲ್ಲಿ ವಸೂಲಿಯು ಸುರಳಿತವಾಗಿ ಆಗುತ್ತದೆ.

2) **ಫಲಶ್ರುತಿ** (Liquidity):

* ಉತ್ತಮ ಹಾಗೂ ಉತ್ಪನ್ನ ಹೆಚ್ಚಿಸುವ ಉದ್ದೇಶಕ್ಕೆ ಸಾಲ ಕೊಟ್ಟಲ್ಲಿ ಸಾಲವು ಸಾಲದಲ್ಲಿಯ ಲಾಭವಾಗಿ ಸಾಲವು ಮರುಪಾವತಿಯಾಗುತ್ತದೆ.

* ಕಡಿಮೆ ಅವಧಿಯ ಸಾಲ ಬೇಡಿಕೆಗೆ ಸಾಲ ಕೊಟ್ಟಲ್ಲಿ ವಸೂಲಿಗೆ ಯಾವುದೇ ತೊಂದರೆಯಿಲ್ಲ.

* ನಿಧಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿಶ್ಚಿತ ಆಸ್ತಿಗಳಲ್ಲಿ **(Fixed Assets)**ಗಳಲ್ಲಿ ವಿನಿಯೋಗಿಸದಿದ್ದಲ್ಲಿ ನಿಧಿಗಳ ವಹಿವಾಟಕ್ಕೆ ತೊಂದರೆ ಆಗಲಾರದು.

3) **ಉದ್ದೇಶಗಳು** (Purpose):

* ಉತ್ಪನ್ನಗಳನ್ನು ಬೆಳೆಸುವ ಹಾಗೂ ಹೆಚ್ಚಿಗೆ ವಹಿವಾಟು ಇರುವ ಔದ್ಯಮಿಕ ಚಟುವಟಿಕೆಗಳಿಗೆ ಅವುಗಳ ಬೆಳವಣಿಗೆಯ ಉದ್ದೇಶಕ್ಕಾಗಿ ಹಾಗೂ ಉತ್ಪಾದನೆಗಳನ್ನು ಹೆಚ್ಚಿಸುವ ಸಲುವಾಗಿ ಸಾಲಗಳ ಮಂಜೂರಿ ಆಗಬೇಕು. ಹೀಗಾದರೆ ಸಾಲದ ವಿನಿಯೋಗ ಉತ್ತಮ ರೀತಿಯಿಂದ ಸಾಲಗಾರರು ಮಾಡಿಕೊಂಡು ಸಾಲ ತುಂಬಲು ಅವರಿಗೆ ಅನುಕೂಲವಾಗುತ್ತದೆ. **(Economically viable and feasible with production oriented units)**

* ಸಾಲಗಳನ್ನು ಮದುವೆ, ಪ್ರವಾಸ, ಹಿಂದಿನ ಸಾಲಗಳ ಮರುಪಾವತಿಗಾಗಿ ಮಂಜೂರು ಮಾಡಬಾರದು.

4) **ಲಾಭದಾಯಕ (Profitability)** :

* ಉತ್ತಮ ಭವಿಷ್ಯವಿರುವ ಸಾಲದ ಪ್ರಸ್ತಾವನೆಯನ್ನು ಮಮಜೂರು ಮಾಡಿದಲ್ಲಿ ಅದು ನಿಶ್ಚಿತವಾಗಿ ಲಾಭ ಗಳಿಸುವಲ್ಲಿ ಯಾವುದೇ ಸಂಶಯವಿರುವುದಿಲ್ಲ. ಅಂತಹ ಪ್ರಸ್ತಾವನೆಗಳಿಗೆ ಉತ್ತೇಜನ ಕೊಡಬೇಕು.

* ನಿಧಿಗಳ ಬಳಕೆಯಲ್ಲಿ ನಿಧಿಗಳ ವೆಚ್ಚಗಳನ್ನು ಪರಿಕ್ಷೀಸಬೇಕು ಹಾಗೂ ಆಪರೇಷನ್ ಖರ್ಚುಗಳನ್ನು ಪರಿಶೀಲಿಸಿ ಹೆಚ್ಚಿಗೆ ಲಾಭವಾಗುವ ಪ್ರಸ್ತಾವನೆಗಳಲ್ಲಿ ಸಾಲ ಮಂಜೂರು ಮಾಡಬೇಕು.

* ಸಹಕಾರಿಯು ಸಾಲ ಕೊಡುವಾಗ ಸಾಲ ಪಡೆಯುವ ವ್ಯಕ್ತಿಯ ವ್ಯವಹಾರಿಕ ವೆಚ್ಚಗಳು, ಸವಕಳಿಗಳು ತೆಗೆದಿರಿಸಿ ಪ್ರಸ್ತಾವಣೆಯು ಲಾಭದಾಯಕವಾಗಿರಬೇಕು.

5) ಭದ್ರತೆ **(Security):**

* ಸುರಕ್ಷತೆ ಮೊದಲು ಆಮೇಲೆ ಭದ್ರತೆ ಎಂದು ಹೇಳಲಾಗುತ್ತದೆ. ಸುರಕ್ಷತೆಯನ್ನು ಬದಿಗೊತ್ತಿ ಭದ್ರತೆಗೆ ಬೆಲೆ ಕೊಟ್ಟರೆ ಭದ್ರತೆಯಿಂದ ಹಣ ವಸೂಲಿ ಮಾಡಲು ವರ್ಷಗಟ್ಟಲೇ ಕಾಯಬೇಕು. ಆದರೂ ಭದ್ರತೆ ಇಲ್ಲದೇ ಯಾವ ಸಾಲವನ್ನು ಕೊಡುವಲಾಗುವುದಿಲ್ಲ. ಸಾಲ ಸುಸ್ಥಿ ಬಾಕಿಯಾದಲ್ಲಿ ಸಾಲ ವಸೂಲಿಯಲ್ಲಿ ಭದ್ರತೆ ಮಾತ್ರ ಸಹಯಕಾರಿಯಾಗುತ್ತದೆ.

* ಉತ್ತದ ಚರಿತ್ರೆಯ ಹಾಗೂ ಸಾಲ ತುಂಬುವ ಸಾಮರ್ಥ್ಯವುಳ್ಳ ಸದಸ್ಯರಿಗೆ ಸಾಲ ಕೊಟ್ಟಲ್ಲಿ ಸಾಲ ವಸೂಲಿಗೆ ಯಾವುದೇ ತೊಂದರೆಯಾಗದೆ ಸಹಕಾರಿಯು ಕಾರ್ಯನಿರ್ವಹಿಸಬಹುದಾಗಿದೆ.

* ಭದ್ರತೆಯು ಬೆಲೆಯುಳ್ಳದ್ದು, ವರ್ಗಾವಣೆಗೆ ಅರ್ಹವಾದದ್ದು, ನಿಶ್ಚಿತವಾಗಿ ಬೇಡಿಕೆಯುಳ್ಳದ್ದು ಯಾವುದೇ ಬೋಜಾ ರಹಿತವಾದದ್ದು ಸ್ಥಿರವಾದದ್ದು ಇದ್ದಲ್ಲಿ ಸಾಲ ವಸೂಲಿಗೆ ಸಹಕಾರಿಗೆ ತೊಂದರೆಯಾಗುವುದಿಲ್ಲ.

* ಯಾವುದೇ ಕಾರಣಕ್ಕೆ ಸಾಲಗಳು ಸುಸ್ಥಿಯಾದಲ್ಲಿ ನಿಶ್ಚಿತ ರೂಪದ ಉತ್ತಮ ಭದ್ರತೆಯು ಸಹಕಾರಿಗೆ ಬರೆದು ಕೊಟ್ಟಿದ್ದಲ್ಲಿ ಅದರ ಮಾರಾಟದಿಂದ ಸಾಲ ಬಾಕಿಗಳನ್ನು ವಸೂಲು ಮಾಡಲು ಶಕ್ಯವಾಗುವುದು. ಹೀಗಾಗಿ ಭದ್ರತೆಯನ್ನು ಅಲ್ಲಗಳೆಯಲಾಗುವುದಿಲ್ಲ.

(ಮುಂದಿನ ಸಂಚಿಕೆಗೆ)



# ಸಾಲ ಮತ್ತು ಮುಂಗಡಗಳನ್ನು ನೀಡುವ ವಿಧಾನಗಳು

ಸೌಹಾರ್ದ ಸಹಕಾರಿಗಳು ನೀಡುವ ಸಾಲಗಳ ಬಗ್ಗೆ ತಿಳುವಳಿಕೆ ನೀಡುವ ದೃಷ್ಟಿಯಿಂದ ಈ ಲೇಖನ ಪ್ರಕಟಿಸಲಾಗಿದೆ.

■ ಜಿ. ಎಸ್. ಟೋಪಣ್ಣವರ, ವಿಭಾಗೀಯ ಅಧಿಕಾರಿ, ಬೆಳಗಾವಿ.

**1) ಸಾಲಗಳನ್ನು ಯಾರಿಗೆ ಕೊಡಬೇಕು?**

ಸಹಕಾರಿಯ ನಿಯಮಿತ ಸದಸ್ಯರು, ಅಸೋಶಿಯೇಟ ಸದಸ್ಯರು, ನಾಮಿನಲ್ ಸದಸ್ಯರಿಗೆ ಸಾಲ ಕೊಡಲು ಕಾನೂನು ಹಾಗೂ ಉಪನಿಯಮಗಳಲ್ಲಿ ಅವಕಾಶವಿರುವುದು.

**2) ಸಹಕಾರಿಯು ತಾನು ಹೊಂದಿದ ಬಂಡವಾಳದಲ್ಲಿ ಎಷ್ಟರ ಮಟ್ಟಿಗೆ ಸಾಲವನ್ನು ಕೊಡಬಲ್ಲದು? (Loanable Funds) (80% of Deposits + Paid up Share Capital + Reserve Fund)**

ಸಹಕಾರಿಯು ತಾನು ಹೊಂದಿದ ಠೇವುಗಳ ಮೇಲೆ 80 ಪ್ರತಿಶತ ಜೊತೆಗೆ ಪೂರ್ತಿ ರಿಜರ್ವ ಫಂಡದಷ್ಟು ಆಗುವ ರಕ್ಕಮನ್ನು ಕೂಡಿಕೊಂಡು ಆಗುವ ಒಟ್ಟು ಹಣವನ್ನು ಸದಸ್ಯರಿಗೆ ಸಾಲ ಕೊಡಲು ಉಪಯೋಗಿಸುವ ಅಧಿಕಾರ ಹೊಂದಿರುತ್ತದೆ.

**3) ವಿವಿಧ ರೀತಿಯ ಸಾಲ ಪ್ರಕಾರಗಳು:**

ಸರ್ವಸಾಮಾನ್ಯವಾಗಿ ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಈ ಕೆಳಗೆ ಬರೆದ ಮೂರು ತರಹದ ಸಾಲ/ಸೌಲಭ್ಯಗಳನ್ನು ಕೊಡಲಾಗುತ್ತದೆ.

**ಅ) ಅವಧಿ ಸಾಲ (Term Loan):**

ಬಂಗಾರ ಬೆಳ್ಳಿ ಸಾಲ, ಠೇವು ಸಾಲ, ಸರ್ಕಾರ ಮತ್ತು ಟ್ರಸ್ಟಿ ಭದ್ರತೆ ಸಾಲ, ಎನ್. ಎಸ್. ಸಿ. ಸಾಲ, ವಿಮೆ ಪಾಲಿಸಿ ಸಾಲ, ವ್ಯಾಪಾರ ಸರಕುಗಳ ಸಾಲ, ಜಾಮೀನು ಸಾಲ

**ಆ) ರೋಖ ಪತ್ತಿನ ಸಾಲ/ಓವರ ಡ್ರಾಫ್ಟ್ (Cash Credit Loan/Over Draft):**

ಜಾಮೀನು ಮೇಲೆ, ವ್ಯಾಪಾರ ಸರಕುಗಳ ಮೇಲೆ, ಸರ್ಕಾರಿ ಭದ್ರತೆಗಳ ಮೇಲೆ, ಎನ್. ಎಸ್. ಸಿ. ಗಳ ಮೇಲೆ, ವಿಮೆ ಪಾಲಿಸಿ ಮೇಲೆ, ಠೇವುಗಳ ಮೇಲೆ

**ಇ) ಬಿಲ್‌ಗಳನ್ನು ಖರೆದಿಸುವುದು ಹಾಗೂ ಡಿಸ್ಕೌಂಟ ಮಾಡುವುದು:**

ಸಹಕಾರಿಗಳಿಗೆ ನೆಗೋಶಿಯೇಬಲ್ ಇನ್ಸ್ಟ್ರುಮೆಂಟ ವ್ಯವಹಾರ ಮಾಡುವ ಅವಕಾಶವಿಲ್ಲದ್ದರಿಂದ ಬಿಲ್ ಖರಿದಿ ಮತ್ತು ಡಿಸ್ಕೌಂಟ ವ್ಯವಹಾರಗಳು ಸಹಕಾರಿಗಳಲ್ಲಿ ಜರುಗುವುದಿಲ್ಲ.

**4) ಉಪನಿಯಮದ ಪ್ರಕಾರ ಸಾಲಗಳನ್ನು ಕೊಡುವುದು.**

ಸಹಕಾರಿಯು ತನ್ನ ಉಪನಿಯಮಗಳ ಪ್ರಕಾರ ಭದ್ರತೆ ಸಾಲ ಹಾಗೂ ಭದ್ರತೆ ರಹಿತ ಸಾಲಗಳನ್ನು ಕೊಡುವ ಅಧಿಕಾರ ಹೊಂದಿರುತ್ತದೆ. ಉಪನಿಯಮಗಳಲ್ಲಿ ಯಾವ ಸಾಲ, ಯಾವ ಭದ್ರತೆ ಮೇಲೆ ಎಷ್ಟು ರಕ್ಕಮುಗಳ ವರೆಗೆ ಕೊಡಬಹುದು? ಎಷ್ಟು ಅವಧಿಯ ಸಲುವಾಗಿ ಕೊಡಬಹುದು? ಹಾಗೂ ಯಾವ ಬಡ್ಡಿ ದರಗಳನ್ನು ಆಕರಿಸಬೇಕು ಎಂಬುದರ ಬಗ್ಗೆ ಸವಿಸ್ತಾರ ಮಾಹಿತಿಯನ್ನು ಉಪನಿಯಮಗಳಲ್ಲಿ ಹೊಂದಿದ್ದರೆ ಸದರಿ ಮಾಹಿತಿ ಪ್ರಕಾರ ಸಹಕಾರಿಯು ಕಾರ್ಯ ನಿರ್ವಹಿಸಬೇಕು. ಇಲ್ಲದಿದ್ದರೆ ಈ ಮೇಲಿನ ವಿವರಗಳನ್ನು ಒಳಗೊಂಡ ಸಾಲ ನಿಯಮಗಳನ್ನು ರಚಿಸಿಕೊಂಡು ಅವುಗಳಿಗೆ ಅನುಮೋದನೆ ಪಡೆದು ಸಹಕಾರಿಯು ಸದಸ್ಯರಿಗೆ ಬೇರೆ ಬೇರೆ ಸಾಲಗಳನ್ನು ನಿಯಮಗಳ ಪ್ರಕಾರ ಕೊಡಬೇಕು.

**5) ಒಬ್ಬ ವ್ಯಕ್ತಿಗೆ ಕೊಡಬಹುದಾದ ಗರಿಷ್ಟ ಸಾಲದ ಮೊತ್ತ (Aggregate Loan Limit):**

ಉಪನಿಯಮಗಳಲ್ಲಿ ಒಬ್ಬ ಸದಸ್ಯರಿಗೆ ಜಾಮೀನು ಸಾಲ ಹಾಗೂ ಎಲ್ಲ ಭದ್ರತೆಗಳ ಮೇಲೆ ಕೂಡಿಕೊಂಡು ಎಷ್ಟು ರಕ್ಕಮುಗಳ ವರೆಗೆ ಒಟ್ಟಾರೆ ಸಾಲ ಮಂಜೂರು ಮಾಡಬಹುದು ಎಂಬುದರ ಬಗ್ಗೆ ವಿವರಗಳನ್ನು ಕೊಡಲಾಗಿರುತ್ತದೆ. ಸದರಿ ಉಪನಿಯಮಗಳ ಪ್ರಕಾರ ಸಹಕಾರಿಯು ಸಾಲ ವ್ಯವಹಾರವನ್ನು ನಿರ್ವಹಿಸಬೇಕು.

**6) ಬೇರೆ ಬೇರೆ ಅವಧಿಯ ಸಾಲಗಳು:**


ಸರ್ವಸಾಮಾನ್ಯವಾಗಿ ಮೂರು ಬೇರೆ ಬೇರೆ ಅವಧಿಯ ಈ ಕೆಳಗೆ ಬರೆದಂತೆ ಸಾಲಗಳನ್ನು ಕೊಡಲಾಗುತ್ತದೆ,

ಅ) ಅಲ್ಪಾವಧಿ ಸಾಲಗಳು **(Short Term Loans)** – 15 ತಿಂಗಳ ಅವಧಿಗೆ

ಬ) ಮಧ್ಯಮ ಅವಧಿ ಸಾಲಗಳು **(Medium Term Loans)** – 15 ತಿಂಗಳ ಮೇಲ್ಪಟ್ಟು 5 ವರ್ಷಗಳ ವರೆಗೆ

ಕ) ದೀರ್ಘಾವಧಿ ಸಾಲಗಳು **(Long term Loans)** – 5 ವರ್ಷಗಳ ಮೇಲ್ಪಟ್ಟ ಅವಧಿಗೆ

**7) ಸಹಕಾರಿಯಲ್ಲಿ ಯಾವ ಅವಧಿಗೆ ಯಾವ ತರಹದ ಸಾಲಗಳನ್ನು ಕೊಡಬಹುದಾಗಿದೆ. ಎಂಬುದನ್ನು ಕೆಳಗೆ ವಿವರಿಸಲಾಗಿದೆ.**




ಅಲ್ಪಾವಧಿ ಸಾಲಗಳು– 15 ತಿಂಗಳ ಅವಧಿಯ ಸಾಲಗಳ ನಮೂನೆಗಳು:

ಅ) ಜಾಮೀನು ಸಾಲ

ಆ) ಬಂಗಾರ ಆಭರಣ ಹಾಗೂ ವ್ಯಾಪಾರ ಸರಕುಗಳ ಒತ್ತಿ ಸಾಲ

ಇ) ರಾಷ್ಟ್ರೀಯ ಉಳಿತಾಯ ಪತ್ರಗಳ ಸಾಲ

ಈ) ಠೇವು ಸಾಲಗಳು (15ತಿಂಗಳ ಅವಧಿಯ ವರೆಗಿನ ಠೇವುಗಳು)

**ಮಧ್ಯಮಾವಧಿ ಸಾಲಗಳು–15ತಿಂಗಳು ಮೇಲ್ಪಟ್ಟು 5 ವರ್ಷಗಳ ಒಳಗಿನ ಸಾಲಗಳು:**

ಅ) ಗೃಹ ಬಳಕೆ ವಸ್ತುಗಳ ಖರೆದಿ ಸಾಲ ಟಿ. ವಿ. ಫ್ರಿಡ್ಜ, ಫರ್ನಿಚರ್ಸ, ಕಂಪ್ಯೂಟರ್ಸ, ಹೊಲಿಗೆ ಯಂತ್ರಗಳು, ಇತರ ವಸ್ತುಗಳ ಖರೆದಿ.

ಆ) ದ್ವೀಚಕ್ರ ವಾಹನ, ಮೂರು ಚಕ್ರ ಹಾಗೂ ನಾಲ್ಕು ಚಕ್ರಗಳ ವಾಹನಗಳು, ಕಾರುಗಳು ಅದಲ್ಲದೇ ಟ್ರಕ್ಕುಗಳು, ಟ್ರ್ಯಾಕ್ಟರುಗಳ ಸಾಲ.

ಇ) ಭದ್ರತೆ ಮೇಲೆ ಮಂಜೂರು ಮಾಡಿದ ಕ್ಯಾಶ ಕ್ರೆಡಿಟ/ಅವಧಿ ಸಾಲ–ಬಂಗಾರದ ದಾಗಿಣೆಗಳು, ಠೇವು ಪಾವತಿಗಳು, ಯಂತ್ರೋಪಕರಣಗಳ ಸಾಲ, ಸೈಟ ಮತ್ತು ಇಮಾರತಿಗಳು, ಬರತಕ್ಕ ಬಾಕಿಗಳು, ಕಚ್ಚಾ ಹಾಗೂ ಪಕ್ಕಾ ವಸ್ತುಗಳು, ವಿಮಾ ಪಾಲಿಸಿಗಳು, ರಾಷ್ಟ್ರೀಯ ಉಳಿತಾಯ ಪತ್ರಗಳು, ಸರ್ಕಾರಿ ಭದ್ರತೆ ಬಾಂಡುಗಳು, ವ್ಯಾಪಾರ ಸರಕುಗಳು (Cash credit limit/term loan against pledge/ Hypothecation of Gold Ornaments, deposit receipts, Machinery equipments, Land & Building, Book Debts, Raw materials & Finished goods, LIC policies, NSC Certificates, Govt. and Trustee securities and mercantile goods)

ಈ) ಯಂತ್ರೋಪಕರಣ/ಔದ್ಯೋಗಿಕ ಭೂಮಿ ಮತ್ತು ಇಮಾರತಿ (Land & Building) ಖರಿದಿಸುವುದು.

ಉ) ಹೈಯರ ಪರ್ಚೆಜ ಸಾಲಗಳು (Higher Purchase Loans)

ಊ) ಗೃಹ ಖರೀದಿ ಸಾಲ

# ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಾಚರಣೆ ಸಹಕಾರಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗೆ ಪೂರಕವಾಗಿದೆ – ಶಾಸಕ ಪರಣ್ಣ ಮುನವಳ್ಳಿ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಬಳ್ಳಾರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಧಿಕಾರಿ ಹಾಗೂ ಹಿರಿಯ ಅಧಿಕಾರಿಗಳಿಗಾಗಿ ಸಾಲ ಪತ್ರ ದಾಖಲಾತಿ ಹಾಗೂ ಸಾಲ ವಸೂಲಾತಿ ಕ್ರಮಗಳ ಕುರಿತಾದ ತರಬೇತಿ ಶಿಬಿರವನ್ನು ಉದ್ಘಾಟಿಸಿದ ಗಂಗಾವತಿಯ ಶಾಸಕ ಶ್ರೀ ಪರಣ್ಣ ಮುನವಳ್ಳಿಯವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಬಹಳ ಉತ್ತಮವಾಗಿ ಕಾರ್ಯನಿರ್ವಹಿಸಿ ಸಹಕಾರಿ ಕ್ಷೇತ್ರದ ಆರೋಗ್ಯಕೆ ಬೆಳವಣಿಗೆಗೆ ಸಹಕಾರಿಯಾಗಿವೆ. ಹಳೆಯ ಕಾಯ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳಿಗಿಂತ ಭಿನ್ನವಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಸಂತೋಷಕರ. ಈ ಕ್ಷೇತ್ರದ ನೇತೃತ್ವ ವಹಿಸಿರುವ ಸಂಯುಕ್ತ ಸಹಕಾರಿಯು ರಾಜ್ಯಾದ್ಯಂತ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿರುವುದು ಸ್ವಾಗತಾರ್ಹ ಹಾಗೂ ಶ್ಲಾಘನೀಯ ಎಂದು ತಿಳಿಸಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ರವರು ಸೌಹಾರ್ದ ಸಹಕಾರಿಗಳಲ್ಲಿ ಹೆಚ್ಚಿನವು ಹೊಸದಾಗಿ ನೊಂದಣಿಯಾಗಿ ಕಾರ್ಯನಿರ್ವಹಿಸುತ್ತಿವೆ. ಸಹಕಾರಿಗಳ ದಕ್ಷ ಕಾರ್ಯನಿರ್ವಹಣೆಗೆ ಸಾಲ ಪತ್ರ ದಾಖಲಾತಿ ಹಾಗೂ ಸಾಲ ವಸೂಲಾತಿ ಕ್ರಮಗಳ ಮಾಹಿತಿ ಇರ ಬೇಕಾದುದು ಅಗತ್ಯ ಆದುದರಿಂದ ಈ ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆಮಾಡಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮ ಪಡೆದುಕೊಳ್ಳಲು ಕರೆನೀಡಿದರು.

ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೆಶಕರುಗಳಾದ ಶ್ರೀ ಸಣ್ಣಸೂಗಪ್ಪಾ,ಶ್ರೀಮತಿ ಮಂಜುಳಾ ಪಾಟೀಲ್, ಶ್ರೀ ಆನಂದ ಎಲ್. ಎಸ್. ಶ್ರೀ ಚನ್ನಬಸವ ಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಮಂಜುನಾಥ ಸಿದ್ದಾಪುರ, ಬ್ಯಾಂಕಿನ ಉಪಾಧ್ಯಕ್ಷ ಶ್ರೀ ಎಸ್.ದೊಡ್ಡಪಂಪಣ್ಣ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಜಿ. ಜವಳಿ ಹಾಗೂ ಸಹಕಾರ ಸಂಘಗಳಸಹಾಯಕ ನಿಬಂಧಕರು ಶ್ರೀ ಎಸ್.ಜಿ.ಜೋಶಿಯವರು ಹಾಗೂ ರೆಡ್ಡಿ ಬ್ಯಾಂಕ್‌ನ ವಸೂಲಿ ಅಧಿಕಾರಿ, ಗಣ್ಯರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮೂರು ಜಿಲ್ಲೆಗಳ 88 ಸಹಕಾರಿಗಳ 110 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮ ಬಹಳ ಗುಣಾತ್ಮಕವಾಗಿತ್ತೆಂದು ಹಾಗೂ ಇಂತಹ ಕಾರ್ಯಕ್ರಮಗಳನ್ನು ಆಗಿಂದಾಗೆ ಪ್ರತಿ ಜಿಲ್ಲೆಯಲ್ಲಿಯೂ ಹಮ್ಮಿಕೊಳ್ಳಲು ಅಭಿಪ್ರಾಯ ವ್ಯಕ್ತವಾಯಿತು.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ಸಿಬ್ಬಂದಿಯವರಿಗೆ "ಆಡಳಿತ ನಿರ್ವಹಣೆಯಲ್ಲಿ ನಾಯಕತ್ವ"




ಪುತ್ತೂರು.ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ಸಿಬ್ಬಂದಿಯವರಿಗೆ "ಆಡಳಿತ ನಿರ್ವಹಣೆಯಲ್ಲಿ ನಾಯಕತ್ವ" ಈ ವಷಯದ ಬಗ್ಗೆ ಮೂರು ದಿನಗಳ ಅಲ್ಪಾವಧಿ ತರಬೇತಿ ಕಾರ್ಯಾಗಾರವನ್ನು ಅಭೀಜ್ಞಾನದ ಟ್ರಸ್ಟ್ ಮಂಗಳೂರು ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್. ಪ್ರಸಾದ್‌ರವರು ಹಾಗೂ ಶ್ರೀಮತಿ ಭಾರತಿ ಪ್ರಸಾದ್‌ರವರು ನಡೆಸಿಕೊಟ್ಟರು ಕಾರ್ಯಕ್ರಮವನ್ನು ಕುಮಾರಿ ವಿದ್ಯಾಸರಸ್ವತಿ ಯವರು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಎ. ವಸಂತರವರು ಸ್ವಾಗತ ಹಾಗೂ ಪ್ರಾಸ್ತವಿಕ ನುಡಿಹೇಳಿದರು. ಕಾರ್ಯಕ್ರಮದಲ್ಲಿ ಶ್ರೀ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಸುನಿಲ್ ಬೋರ್ಕರ್, ಪ್ರಭಾಕರ್‌ರವರು ಹಾಗೂ ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿ ಶ್ರೀ ವಿ.ಜೆ. ಕಾರ್‌ಕೂನ್‌ರವರು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಶುಭಹಾರೈಸಿದ್ದಾರೆ.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ "ವರುಷದ ಹರುಷ"

ಬೆಂಗಳೂರು; ಶ್ರೀ ಸರಸ್ವತಿ ಕ್ರೆಡಿಟ್ ಸೌಹಾದ್ ಸಹಕಾರಿಯವರ ಬೆಂಗಳೂರಿನ ಶಾಖೆಯು ಪ್ರಾರಂಭ ಗೊಂಡು ಯಶಸ್ವಿಯಾಗಿ ಒಂದು ವರ್ಷ ಪೂರೈಸಿ ಎರಡನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಶುಭ ಸಂದರ್ಭವನ್ನು ವರುಷ ಹರುಷ ಕಾರ್ಯಕ್ರಮವು ದಿನಾಂಕ 13 ನವಂಬರ್ 2011 ರಂದು ಬೆಳಗ್ಗೆ 8 ಗಂಟೆಯಿಂದ ರಿಂದ ಸಂಜೆ 6 ಗಂಟೆಯವರೆಗೆ ಶಾಖೆಯಲ್ಲಿ ನಡೆಯಲಿದೆ. ಕಾರ್ಯಕ್ರಮಕ್ಕೆ ಈ ಮೂಲಕ ಆಡಳಿತ ಮಂಡಳಿಯು ತಮ್ಮೆಲ್ಲರಿಗೂ ಆದರಪೂರ್ವಕವಾಗಿ ಸ್ವಾಗತಿಸುತ್ತಿದ್ದಾರೆ.

# ಶ್ರೀ ರಾಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನಲ್ಲಿ ಇ-ಸ್ಟ್ಯಾಂಪಿಗ್ ಸೇವೆ ಪ್ರಾರಂಭ

**ಬೈಂದೂರು:** ಶ್ರೀ ರಾಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್‌ನಲ್ಲಿ ಇ–ಸ್ಟ್ಯಾಂಪಿಗ್ ಸೇವೆಯು ದಿನಾಂಕ: 12/09/2011ರ ಸೋಮವಾರದಂದು ಬೆಳಗ್ಗೆ 10.00 ಕ್ಕೆ ಸಹಕಾರಿಯ ಪ್ರಧಾನ ಕಛೇರಿ, ಬೈಂದೂರಿನಲ್ಲಿ ಧರ್ಮಗುರು ಹೋಲಿ ಕ್ರಾಸ್ ಚರ್ಚ್‌ನ,ಶ್ರೀ ರೆ/ಫಾ/ಪ್ರಾನ್ಸಿಸ್ ಕರ್ನೆಲಿಯೊ ಇವರು ಉದ್ಘಾಟಿಸಿ ಸಹಕಾರಿ ಸಂಸ್ಥೆಗಳು ಬದಲಾದ ವ್ಯವಸ್ಥೆಗೆ ಹೊಂದಿಕೊಂಡು ಕಾರ್ಯನಿರ್ವಹಿಸಿದಲ್ಲಿ ಅಭಿವೃದ್ಧಿ ಸಾಧ್ಯವೆಂದು ತಿಳಿಸಿದರು.

ಈ ಸುಸಂದರ್ಭದಲ್ಲಿ ಶ್ರೀ ಎಸ್. ರಾಜು ಪೂಜಾರಿ, ಸಹಕಾರಿ ಅಧ್ಯಕ್ಷರು ಹಾಗೂ ಶ್ರೀ ಕೆ. ಗೋಪಾಲ ಪೂಜಾರಿ ಮಾಜಿ ಶಾಸಕರು ಬೈಂದೂರು, ಶ್ರೀ ಕೆ. ಅನಂತ ಪದ್ಮನಾಭ ನಾಯರಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇತರರು ಉಪಸ್ಥಿತರಿದ್ದರು.



# ಉಡುಪಿಯ ಜನಹಿತ ಸೌಹಾರ್ದ ಸಹಕಾರಿಯಲ್ಲಿ 4ನೇ ವಾರ್ಷಿಕ ಸಾಮಾನ್ಯ ಸಭೆ



ಉಡುಪಿಯ ದುರ್ಗಾ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ಕಳೆದ ಸೆಪ್ಟೆಂಬರ್ 25ರಂದು ಉಡುಪಿಯ ಜನಹಿತ ಸೌಹಾರ್ದ ಸಹಕಾರಿಯು 2011–12ನೇ ಸಾಲಿನ 4ನೇ ವಾರ್ಷಿಕ ಮಹಾಸಭೆಯನ್ನು ಶ್ರೀ ಯು. ಗೋಪಾಲ್ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯ ಹುಟ್ಟು ಬೆಳವಣಿಗೆ ಮತ್ತು ಮುಂದಿನ ಭವಿಷ್ಯ ದಿಕ್ಸೂಚಿ ನೀಡಲಾಗಿದೆ ಎಂದು ಸಹಕಾರಿಯ ನಿರ್ದೇಶಕರು ಮತ್ತು ಅಧ್ಯಕ್ಷರಾದ ವೈ.ಎಸ್. ಮಡಿವಾಳ್ ತಿಳಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಶ್ರೀ ಸದಾನಂದ ಪ್ರಭು, ಸಂಸ್ಥೆಯ ನಿರ್ದೇಶಕರುಗಳಾದ ಕೃಷ್ಣ, ಯು.ವಿ.ಉಪೇಂದ್ರನಾಯಕ್, ಗೋಪಾಲ್ ಮೂಲ್ಯ, ವಿಜಯಶೆಟ್ಟಿ, ಕೃಷ್ಣ ಎಂ.ಸಾಲಾನ್, ವಸಂತ್‌ನಾಯ್ಕ್, ಮಂಜು ನಾಥನಾಯ್ಕ್, ಶಶಿಧರನ್, ಎ.ಎಸ್. ಬಾಲಕೃಷ್ಣ, ಶ್ರೀಮತಿ ಚೇತನಾ ಜಿ.ನಾಯಕ್ ಉಪಸ್ಥಿತರಿದ್ದರು. ಹಾಗೂ ದಿ:02.10.11ರಂದು ಜನಹಿತ ಸೌಹಾರ್ದ ಸಹಕಾರಿಯ ನೂತನ ಬ್ಯಾಂಕಿಂಗ್ ವಿಭಾಗವನ್ನು ಶ್ರೀ ರತ್ನಕುಮಾರ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರು, ಸಿಬ್ಬಂದಿವರ್ಗದವರು ಭಾಗವಹಿಸಿದ್ದರು.

## ಯೂನಿಫೈಡ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ ಉದ್ಘಾಟನೆ

# ಸಹಕಾರಿ ಕ್ಷೇತ್ರವನ್ನು ಬಲ ಪಡಿಸಲು ಶಾಸಕ ರವಿ ಸುಬ್ರಮಣ್ಯ ಕರೆ

ಬೆಂಗಳೂರು ನಗರದ ಬನಶಂಕರಿ ಒಂದನೇ ಹಂತದ ಎಸ್‌ಬಿಎಂ ಕಾಲೋನಿಯಲ್ಲಿ ದಿನಾಂಕ:28–10–2011 ರಂದು ಯೂನಿಫೈಡ್ ಸೌಹಾರ್ದ ಕ್ರೆಡಿಟ್ ಕೋ– ಆಫ್ ಸಹಕಾರಿಯನ್ನ ಬಸವನ ಗುಡಿಯ ಶಾಸಕ ಶ್ರೀ ಎಲ್.ಎ. ರವಿ ಸುಬ್ರಮಣ್ಯರವರು ಉದ್ಘಾಟಿಸಿ ಸಹಕಾರ ಕ್ಷೇತ್ರ ಈ ದೇಶದಲ್ಲಿ ಒಂದು ಉತ್ತಮ ಆರ್ಥಿಕ ವ್ಯವಸ್ಥೆಯಾಗಿ ಕಳೆದ ಒಂದು ಶತಮಾನದಿಂದ ಕಾರ್ಯನಿರ್ವಹಿಸುತ್ತಾ ಆರ್ಥಿಕವಾಗಿ ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಸಾಧನವಾಗಿದೆ. ಇದನ್ನು ಬಲ ಪಡಿಸಿ ಹೆಚ್ಚಿನ ಪ್ರಯೋಜನ ಪಡೆಯಲು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜ ಶೆಟ್ಟಿಯವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಹೆಚ್. ಸಿ. ನಾಗರತ್ನ, ಉಪ ಪ್ರಧಾನ ವ್ಯವಸ್ಥಾಪಕ ಶ್ರೀ ವೈ. ಕುಮಾರ್ ಹಾಗೂ ಸಹಕಾರ ಸಂಘದ ಜಂಟಿ ನಿಬಂದಕರ ಪ್ರತಿನಿಧಿಯಾಗಿ ಶ್ರೀ ಚಿ ಸುಬ್ರಮಣ್ಯ ಗೌಡ ಮತ್ತು ಸಹಕಾರಿಯ ನಿರ್ದೇಶಕ ಮಂಡಳಿಯವರು ಹಾಗೂ ಅನೇಕ ಸಹಕಾರಿ ಗಣ್ಯರು, ಸದಸ್ಯರು ಭಾಗವಹಿಸಿದ್ದರು.



ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ, ತುಮಕೂರು



ಶ್ರೀ ವೀರಭದ್ರೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ನೂತನ ಇ–ಸ್ಟಾಂಪಿಂಗ್ ಉದ್ಘಾಟನಾ ಕಾರ್ಯಕ್ರಮದ ಭಾವಚಿತ್ರ.

# ಸಹಕಾರಿ ನಿಬಂಧಕರು ನಿರ್ವಹಿಸುವ ಕಾರ್ಯಗಳು



ಸಿ.ಎನ್. ಪರಶಿವಮೂರ್ತಿ
ಸಹಕಾರ ಸಂಘಗಳ
ನಿವೃತ್ತ ಅಪರ ನಿಬಂಧಕರು

1. ಸಹಕಾರಿಯ ನೋಂದಣಿ
2. ಉಪನಿಯಮಗಳ ತಿದ್ದುಪಡಿ ನೋಂದಣಿ
3. ಚುನಾವಣಾಧಿಕಾರಿ ನೇಮಿಸಿ ಆಡಳಿತ ಮಂಡಳಿ ರಚನೆ
4. ಸಹಕಾರಗಳ ಕಾರ್ಯ ನಿರ್ವಹಣೆ ನಡೆಸುವುದು
5. ವಿವಾದಗಳ ಇತ್ಯರ್ಥ
6. ಸಹಕಾರಿಗಳ ಸಮಾಪನೆ

**ನಿಬಂಧಕರು ಈ ಕೆಲಸ ನಿರ್ವಹಿಸಲು ಅನುಸರಿಸಬೇಕಾದ ಕ್ರಮಗಳು :**

**1. ಸಹಕಾರಿಯ ನೋಂದಣಿ :** ಒಂದು ಸಹಕಾರಿನೊೀಂದಣಿ ಮಾಡುವಾಗ, ಆ ಸಹಕಾರಿ ತನ್ನ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ಇರುವ ಸದಸ್ಯರ ಹಿತಾಸಕ್ತಿ ಹೊಂದಿದೆಯೇ? ಮತ್ತು ಸಹಕಾರಿ ತತ್ವಗಳನ್ನು ಅನುಸರಿಸಿ ಉಪನಿಯಮ ರಚಿಸಿದೆಯೇ? ಎಂದುದನ್ನು ನಿಬಂಧಕರು ಗಮನಿಸುತ್ತಾರೆ. ಒಂದು ಸಹಕಾರ ರಚನೆಗೆ ಬೇರೆ ಬೇರೆ ಕುಟುಂಬದ ಹತ್ತು ವ್ಯಕ್ತಿಗಳು ಕೂಡಿ ನೋಂದಾಯಿಸಬುಹುದೆಂದು ಸೂಚಿಸಿದ್ದರೂ, ಸಹಕಾರಿಯ ಸಬಲತೆ ಇರಬೇಕೆಂದು ಕನಿಷ್ಟ ಪ್ರಮಾಣದ ಸದಸ್ಯರು ಮತ್ತು ಪಾಲು ಸೂಚಿಸಿದ್ದರೂ, ಸಹಕಾರಿಯ ಸಬಲತೆ ಇರಬೇಕೆಂದು ಕನಿಷ್ಟ ಪ್ರಮಾಣದ ಸದಸ್ಯರು ಮತ್ತು ಪಾಲು ಬಂಡವಾಳ ಸಂಗ್ರಹಿಸಬೇಕೆಂದು ಶರತ್ತು ವಿಧಿಸಲಾಗಿದೆ. ಅದರಂತೆ ಸಹಕಾರಿ ನೊಂದಣಿಗೆ ಈ ಕೆಳಕಂಡಂತೆ ಇರಬೇಕು.

| ಕ್ರ.ಸಂ. | ಸಹಕಾರಿ ಕಾರ್ಯವ್ಯಾಪ್ತಿ | ಕನಿಷ್ಟ ಸದಸ್ಯರ ಸಂಖ್ಯೆ | ಪ್ರಾರಂಭಿಕ ಷೇರುಧನ |
|---|---|---|---|
| 1 | 2ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇದ್ದಲ್ಲಿ | 200 | ರೂ.2.00ಲಕ್ಷ |
| 2 | 2ಲಕ್ಷದಿಂದ 5ಲಕ್ಷ ಜನಸಂಖ್ಯೆ ಇದ್ದಲ್ಲಿ | 300 | ರೂ.3.00ಲಕ್ಷ |
| 3 | 5ಲಕ್ಷದಿಂದ 10ಲಕ್ಷ ಜನಸಂಖ್ಯೆ ಇದ್ದಲ್ಲಿ | 500 | ರೂ.5.00ಲಕ್ಷ |
| 4 | 10ಲಕ್ಷದಿಂದ 20ಲಕ್ಷ ಜನಸಂಖ್ಯೆ ಇದ್ದಲ್ಲಿ | 750 | ರೂ. 8.00ಲಕ್ಷ |
| 5 | 20ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇದ್ದಲ್ಲಿ | 1000 | ರೂ.10.00ಲಕ್ಷ |

ಮೇಲ್ಕಂಡ ಸುತ್ತೋಲೆ ಹೊರಡಿಸುವ ಪೂರ್ವದಲ್ಲಿ ಕಲಂ4ರ ಮೊದಲನೇ ಪರಂತುದಲ್ಲಿ ಯಾವುದೇ ಸಹಕಾರಿಯುಆರ್ಥಿಕವಾಗಿ ಅಭದ್ರವಾಗುವ ಸಂಭವವಿದ್ದರೆ ಅಥವಾ ನೋಂದಣಿ ಮಾಡುವುದರಿಂದ ಸಹಕಾರಿ ಚಳುವಳಿ ಅಭಿವೃದ್ಧಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡುತ್ತದೆಂದು ಕಂಡು ಬಂದರೆ ನೊಂದಾಯಿಸತಕ್ಕದ್ದಲ್ಲವೆಂದಿರುವುದರಿಂದ ನಿಬಂಧಕರು ಇಂತಿಷ್ಟು ಸದಸ್ಯರು ಮತ್ತು ಪಾಲು ಬಂಡವಾಳ ಸಂಗ್ರಹಣೆಯ ಶರತ್ತು ವಿಧಿಸಿದ್ದಾರೆ.

ನೋಂದಾವಣೆಗೆ ಸಂಬಂಧಪಟ್ಟಂತೆ ಗೃಹ ನಿರ್ಮಾಣ ಸಹಕಾರಿ ನೋಂದಾವಣಿ ಅಥವಾ ಪರಿವರ್ತನೆ ಮಾಡತಕ್ಕದ್ದಲ್ಲವೆಂದು ತಿಳಿಸಿದೆ. 1959ರ ಕಾಯಿದೆಯಲ್ಲಿ ನೋಂದಾವಣೆಯಾದ ಸಹಕಾರಿ ಒಣದು ನಿರ್ಮಾಣವನ್ನು ಮಹಾಸಭೆಯಿಂದ ಪಡೆದು ಸಲ್ಲಿಸಬೇಕು.

ನೋಂದಾವಣಿ ಶುಲ್ಕವನ್ನು ಕನಿಷ್ಟ ರೂ.500/– ರಿಂದ ರೂ.5000/–ದವರೆಗೆ ಪಾಲು ಬಂಡವಾಳದ ಶೇಕಡ ಒಂದರಷ್ಟು ಪಾವತಿಸತಕ್ಕದ್ದು ಮತ್ತು ಇದರ ಜೊತೆ ಸರ್ಕಾರದಿಂದ ಮತ್ತು ಮತ್ತೊಂದು ಸಹಕಾರ ಸಂಘದಿಂದ ಸಾಲ ಖಾತರಿ ಪಡೆದಿಲ್ಲವೆಂದು ಪರಿವರ್ತಿಸುವ ಸಹಕಾರ ಸಂಘದಿಂದ ಪ್ರಮಾಣ ಪತ್ರ ಪಡೆಯತಕ್ಕದ್ದು.

ಇದರ ಜೊತೆಗೆ ಸೌಹಾರ್ದ ಸಹಕಾರ ನೊಂದಣಿ ಸಂದರ್ಭದಲ್ಲಿ ಪ್ರವರ್ತಕ/ಮುಖ್ಯಪ್ರವರ್ತಕ. ನಿಬಂಧಕರ ಕಛೇರಿಗೆ ಭೇಟಿಕೊಡುವ ಅವಶ್ಯಕತೆ ಇಲ್ಲ. ಏಕೆಂದರೆ ಪ್ರಸ್ತಾವನೆಯನ್ನು ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸಬಹುದು ಮತ್ತು ನಿಬಂಧಕರು ನೋಂದಣಿ ಮಾಡಿದ ನಂತರ ರಿಜಿಸ್ಟರ್ಡ್ ಅಂಚೆ ಮೂಲಕವೇ ನೋಂದಾವಣಿ ಮಾಡಿದ ಉಪನಿಯಮ ಮತ್ತು ನೋಂದಣಿ ಪತ್ರವನ್ನು ಕಳುಹಿಸತಕ್ಕದ್ದು. ನೋಂದಣಿ ಮಾಡಲು ಅಥವಾ ತಿರಸ್ಕರಿಸಲು ತೊಂಬತ್ತು ದಿವಸದೊಳಗೆ ತೀರ್ಮಾನಿಸತಕ್ಕದ್ದು. ಆ ಅವಧಿಯಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳದಿದ್ದರೆ ಉಪನಿಯಮ ಮತ್ತು ಸಹಕಾರಿ ನೋಂದಣಿಯಾಗಿದೆ ಎಂದು ಭಾವಿಸತಕ್ಕಂತೆ, ಸಂಬಂಧಪಟ್ಟ ನಿಬಂಧಕರು ಪ್ರಮಾಣ ಪತ್ರ ಹೊರಡಿಸಬೇಕು. ಆದರೆ ಉಪನಿಯಮಗಳಡಿ, ಅಂದರೆ ಕಲಂ 10 ರಲ್ಲಿ, ಸೇರಿಸಿರುವ ಅವಕಾಶಗಳನ್ನಲ್ಲದೆ, ಸೌಹಾರ್ದ ಕಾಯಿದೆ ಅಥವಾ ಇನ್ನಿತರೆ ಕಾಯಿದೆಯ ನಿರ್ಭಂದಗಳ ವಿರುದ್ಧ ಅವಕಾಶ ಕಲ್ಪಿಸಿದರೆ ಅಂತಹ ಚಟುವಟಿಕೆಗಳು ಸಿಂಧುವಾಗತಕ್ಕದ್ದಲ್ಲ.

**2.ತಿದ್ದುಪಡಿ :** ಉಪನಿಯಮಗಳ ತಿದ್ದುಪಡಿಗೆ ಆಡಳಿತ ಮಂಡಳಿ ಚರ್ಚಿಸಿ, ತೀರ್ಮಾನಿಸಿದ ನಂತರ ಕನಿಷ್ಟ ಇಪ್ಪತ್ತು ದಿವಸಗಳ ನೋಟೀಸ್ ಹೊರಡಿಸಿ ತಿದ್ದುಪಡಿಯಾಗಬೇಕಾದ ಉಪನಿಯಮ ಮತ್ತು ಹಾಲಿ ಇರುವ ಉಪನಿಯಮಗಳ ಪೂರ್ಣ ಪಾಠವನ್ನು ಪ್ರತಿ ಸದಸ್ಯನಿಗೂ ರವಾನಿಸತಕ್ಕದ್ದು. ಮಹಾಸಭೆಯಲ್ಲಿ ಒಪ್ಪಿಗೆಯಾದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ನಿಬಂಧಕರಿಗೆ ರಿಜಿಸ್ಟರ್ಡ್ ಅಂಚೆ ಮೂಲಕ ರವಾನಿಸುವುದು . ನಿಬಂಧಕರು ಪ್ರಸ್ತಾವನೆ ತಲುಪಿದ ನಂತರ ಸಹಕಾರಿ ನೋಂದಣಿಗೆ ಅನುಸರಿಸಿದ ನೀತಿಯಂತೆಯೇ ಒಪ್ಪಿಗೆಯಾದ ದಿನಾಂಕ ಅಥವಾ ತೊಂಬತ್ತು ದಿನಗಳೊಳಗೆ ರಿಜಿಸ್ಟರ್ಡ್ ಅಂಚೆ ಮೂಲಕ ರವಾನಿಸಕ್ಕದ್ದು.

ಈ ಮೇಲ್ಕಂಡ ನೋಂದಣಿ ಮತ್ತು ತಿದ್ದುಪಡಿಯನ್ನು ಸಂಬಂಧಪಟ್ಟ ನಿಬಂಧಕರು ಕ್ರಮ ಜರುಗಿಸದಿದ್ದರೆ, 91 ನೇ ದಿನ, ಆ ಅಧಿಕಾರಿಯ ನಿಕಟ ಮೇಲಾಧಿಕಾರಿಗೆ ಮನವಿ ಸಲ್ಲಿಸಿದರೆ, ಅವರು ನಿರ್ದೇಶನ ಕೊಡುತ್ತಾರೆ. (ಅಂದರೆ ನೋಂದಣಿ ಪ್ರಮಾಣ ಪತ್ರ ನೀಡಲು ಕಲಂ5)

**3. ಚುನಾವಣಾಧಿಕಾರಿ ನೇಮಕ :** ಒಂದು ಸಹಕಾರಿಯ ಪದಾವಧಿ, ಅಧಿಕಾರ ವಹಿಸಿಕೊಂಡ ಈದು ವರ್ಷಗಳಿರತಕ್ಕದ್ದು. ಪ್ರತಿ ಹೊಎಹೋಗುವ ಆಡಳಿತ ಮಂಡಳಿ, ಒಳಬರುವ ಆಡಳಿತ ಮಂಡಳಿ ರಚನೆಗೆ ಕ್ರಮ ಜರುತಗಿತಕ್ಕದ್ದು (ಕಲಂ26). ಪರಿವರ್ತನೆಗೊಂಡ ಸಹಕಾರಿ ಅರವತ್ತು ದಿವಸಗಳೊಳಗೆ ಹೊಸ ಆಡಳಿತ ಮಂಡಳಿಗೆ ಚುನಾವಣೆ ನಡೆಸತಕ್ಕದ್ದು. ಪ್ರಾಥಮಿಕ ಸಹಕಾರಿಗಳ ಆಡಳಿತ ಮಂಡಳಿಯ ಸಂಖ್ಯೆ ಒಂಬತ್ತರಿಂದ ಹದಿನೈದು ನಿರ್ದೇಶಕರನ್ನು ಹೊಂದಬಹುದು. ಚುನಾವಣೆ ವರ್ಷದ ಮಧ್ಯದಲ್ಲಿ ನಡೆದಿದ್ದರೆ, ಅದನ್ನು ಒಂದು ವರ್ಷವೆಂದು ಭಾವಿಸತಕ್ಕದ್ದು.

ಸೌಹಾರ್ದ ಕಾಯಿದೆಯ ಮತ್ತೊಂದು ವಿಶೇಷವೇನೆಂದರೆ 1959ರ ಕಾಯಿದೆಯಲ್ಲಿ ಚುನಾವಣೆಯನ್ನು ಮಹಾಸಭೆಯಿಂದ ಬೇರ್ಪಡಿಸಲಾಗಿದೆ. ಆದರೆ ಸೌಹಾರ್ದ ಕಾಯಿದೆಯಲ್ಲಿ, ಮಹಾಸಭೆಯನ್ನು ಒಂದು ವಿಷಯಮಾಗಿ ಸೇರಿಸಿದೆ.

ಚುನಾವಣಾಧಿಕಾರಿಯನ್ನು ನೇಮಿಸುವ ಅಧಿಕಾರ ನಿಬಂಧಕರಿಗೆ 2004ರಲ್ಲಿ ಸಂಯುಕ್ತ ಸಹಕಾರಿಯಿಂದ ವರ್ಗಾವಣೆ ಹೊಂದಿದೆ. ಚುನಾವಣೆ ನಡೆಸುವ ವಿಧಿವಿಧಾನವನ್ನು ಸೌಹಾರ್ದ ಸಹಕಾರಿ ನಿಯಮ 2004ರ ನಿಯಮ ಐದರಲ್ಲಿ ವಿವರವಾಗಿ ಕೊಡಲಾಗಿದೆ ಮತ್ತು ಈ ಚುನಾವಣೆ ನಂತರ, ನಿರ್ದೇಶಕರ ಪಟ್ಟಿಯನ್ನು ಸಹಕಾರಿಗೆ ಕೊಟ್ಟ ನಂತರ, ಪದಾಧಿಕಾರಿಗಳ ಆಯ್ಕೆಯನ್ನು ಆಡಳಿತ ಮಂಡಳಿ ನಿರ್ವಹಿಸುತ್ತದೆ (ಕಲಂ28). ಪದಾಧಿಕಾರಿ ಆಯ್ಕೆ ಸಂಧರ್ಭದಲ್ಲಿ ಸ್ಪರ್ದೆಯಲ್ಲಿಲ್ಲದ ಒಬ್ಬ ನಿರ್ದೇಶಕ, ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು. ಎಲ್ಲಾ ನಿರ್ದೇಶಕರೂ ಸ್ಪರ್ದಿಸಿದರೆ, ಸಹಕಾರಿಯ ಮುಖ್ಯ ಕಾಯಾನಿರ್ವಾಹಕ ಸಭಾಧ್ಯಕ್ಷತೆ ವಹಿಸತಕ್ಕದ್ದು (ಉಪಕಲಂ(1))

(ಮುಂದಿನ ಸಂಚಿಕೆಗೆ)


## ಸಹಕಾರ ಸಪ್ತಾಹದ ಹಿನ್ನೆಲೆಯಲ್ಲಿ ಒಂದು ಚಿಂತನೆ :

# ನೆಹರೂರವರ ದೃಷ್ಟಿಯಲ್ಲಿ ಸಹಕಾರ ಚಳುವಳಿ

ಬಡತನ ನಿರಕ್ಷರತೆ ಹಾಗೂ ಬಹುತೇಕ ಜನ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಕಾಮಗಾರಿಗಳನ್ನೇ ಹೊಂದಿಕೊಂಡಿರುವ ಕೃಷಿಪ್ರಧಾನವಾದ ನಮ್ಮ ಈ ದೇಶದಲ್ಲಿ ಸಹಕಾರ ಮಾರ್ಗದಿಂದಲೇ ಜನ ಜೀವನದ ಆರ್ಥಿಕ ಸಾಮಾಜಿಕ ಉನ್ನತಿ ಸಾಧ್ಯ ಎಂಬುದನ್ನು ಸಮಾಜವಾದೀ ತತ್ವದಲ್ಲಿ ಅನುರಾಗ ಹೊಂದಿದ್ದ ನೆಹರೂರವರು ತನ್ನ ಸಾರ್ವಜನಿಕ ಜೀವನದ ಹಾದಿಯಲ್ಲೇ ಕಂಡುಕೊಂಡಿದ್ದರು. ನೆಹರು ಜನ್ಮದಿನವನ್ನು ಸಹಕಾರ ಸಪ್ತಾಹವಾಗಿ ದೇಶದಾದ್ಯಂತ ಆಚರಿಸಲಾಗುತ್ತಿದೆ.

ನವೆಂಬರ್ 14 ರ ಚಿರಸ್ಮರಣೀಯ ದಿನ. ಭಾರತದಲ್ಲಿ ಚಾಚಾ ನೆಹರೂ ಎಂಬುದಾಗಿ ಮಕ್ಕಳಿಗೆಲ್ಲಾ ಪ್ರಿಯರಾಗಿದ್ದ ಜವಾಹರಲಾಲ ನೆಹರೂರವರ ಹುಟ್ಟಿದ ದಿನ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚಿಕ್ಕಂದಿನಿಂದಲೇ ಧುಮುಕಿ ರಾಷ್ಟ್ರೀಯ ನೇತಾರರೆಂದು ಮಹಾತ್ಮಾ ಗಾಂಧೀಜಿಯವರ ಆಶೀರ್ವಾದ ಪಡೆದು, ದೇಶದ ಸ್ವಾತಂತ್ರ್ಯದ ಪ್ರಥಮ ಎರಡು ದಶಕಗಳಲ್ಲಿ ಪ್ರಗತಿಪರ ಹೆಜ್ಜೆಗಳನ್ನು ಇಟ್ಟು ಮಹತ್ತರ ಸಾಧನೆಗೆ ಕಾರಣೀಭೂತರಾದ ಮಹಾನ್ ಚೇತನ ಜವಾಹರಲಾಲರು. ಅವರ ಜನ್ಮ ದಿನವನ್ನು ಮಕ್ಕಳ ದಿನವಾಗಿ ಆಚರಿಸುವುದರೊಂದಿಗೇನೇ ಸಹಕಾರ ಸಪ್ತಾಹದ ಪ್ರಾರಂಭದ ದಿನವಾಗಿಯೂ ದೇಶದಾದ್ಯಂತ ಆಚರಿಸಲಾಗುತ್ತಿದೆ.



ಬಡತನ ನಿರಕ್ಷರತೆ ಹಾಗೂ ಬಹುತೇಕ ಜನ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಕಾಮಗಾರಿಗಳನ್ನೇ ಹೊಂದಿಕೊಂಡಿರುವ ಕೃಷಿಪ್ರಧಾನವಾದ ನಮ್ಮ ಈ ದೇಶದಲ್ಲಿ ಸಹಕಾರ ಮಾರ್ಗದಿಂದಲೇ ಜನ ಜೀವನದ ಆರ್ಥಿಕ ಸಾಮಾಜಿಕ ಉನ್ನತಿ ಸಾಧ್ಯ ಎಂಬುದನ್ನು ಸಮಾಜವಾದೀ ತತ್ವದಲ್ಲಿ ಅನುರಾಗ ಹೊಂದಿದ್ದ ನೆಹರೂರವರು ತನ್ನ ಸಾರ್ವಜನಿಕ ಜೀವನದ ಹಾದಿಯಲ್ಲೇ ಕಂಡುಕೊಂಡಿದ್ದರು. ಹೀಗಾಗಿ ಭಾರತದ ರಾಷ್ಟ್ರೀಯ ಸಹಕಾರಿ ಒಕ್ಕೂಟ (ಎನ್‌ಸಿಯುಐ) ಅವರ ಹುಟ್ಟುಹಬ್ಬವನ್ನು ದೇಶದಾದ್ಯಂತ "ಸಹಕಾರ" ದಿನವಾಗಿ ಆಚರಿಸುತ್ತದೆ. ಇದು ಸಹಕಾರಿ ಸಪ್ತಾಹದ ಪ್ರಾರಂಭವೂ ಕೂಡಾ. ಅಂದಿನಿಂದ ಏಳು ದಿನಗಳ ತನಕ ದೇಶದ ಮೂಲೆಗಳಲ್ಲಿ ಸಹಕಾರದ ವಿವಿಧ ಮುಖಗಳ ಅರಿವನ್ನು ಜನತೆಗೆ ಮಾಡಿಕೊಡಲು ಪ್ರಯತ್ನ ನಡೆದಿದೆ. ಸಹಕಾರದ ಆದರ್ಶ, ಇದೆ ಅನುಷ್ಠಾನದಿಂದಲೇ ಅಧಿಕ ಉತ್ಪಾದನೆ, ಕೃಷಿಕೈಗಾರಿಕೆಗಳಲ್ಲಿ ಪ್ರಗತಿ, ಬೆಲೆ ನಿಯಂತ್ರಣ ಇನ್ನಿತರ ಆರ್ಥಿಕ ರಂಗಗಳಲ್ಲಿ ಪ್ರಗತಿ ಸಾಧನೆ ವಿಧಾನವಿದೆಯೆಂಬುದನ್ನು ತಿಳಿಯಪಡಿಸಲು ಸಹಕಾರ ಕಾರ್ಯಕರ್ತರಲ್ಲಿ ಹೊಸ ಹುರುಪನ್ನು ಹುರಿದುಂಬಿಸುವುದು ಸಹಕಾರ ಸಪ್ತಾಹದ ಉದ್ದೇಶವಾಗಿದೆ.

ಸಹಕಾರ ತತ್ವ ಎಂದೊಡನೆ ಅದೊಂದು ಸುವ್ಯವಸ್ಥಿತ ಆರ್ಥಿಕ ವ್ಯವಸ್ಥೆ ಎಂಬುದು ಸರ್ವೇ ಸಾಮಾನ್ಯ ಭಾವನೆ. ಆದರೆ ಈ ಪದ್ಧತಿ ಬರೇ ಆರ್ಥಿಕ ವ್ಯವಸ್ಥೆ ಮಾತ್ರವಲ್ಲ. ಜನಜೀವನದಲ್ಲಿ ವ್ಯಾವಹಾರಿಕವಾಗಿ ನಡೆದು ಬಂದ ಸಾಮಾಜಿಕ ವ್ಯವಸ್ಥೆಯೂ ಆಗಿದೆ. ಸಹಕಾರ ಎಂದರೆ ಪರಸ್ಪರತೆ, ಪರಸ್ಪರ ನೆರವಾಗುವ ವ್ಯವಸ್ಥೆ ಹಾಗೂ ಶಾಂತಿಯುತ ಪ್ರಗತಿ ಸಾಧನೆಯ ಮಾರ್ಗ, ಪರಸ್ಪರ ಸಹಕಾರದ ದೃಷ್ಟಿಕೋನವಿಟ್ಟುಕೊಂಡ ಜನ ಎಂದವರು ನೆಹರೂ.

ಸ್ವಾಯತ್ತತೆ ಸಹಕಾರ ಪದ್ಧತಿಯ ಮುಖ್ಯ ಉದ್ದೇಶ. ಗ್ರಾಮಾಂತರ ಜನತೆಯ, ನಿಶ್ಚಿತ ಘಟಕಯಾ ಸಮೂಹ ಅಥವಾ ಸಮಾಜದ ಆರ್ಥಿಕ ಉನ್ನತಿ ಪರಸ್ಪರ ಸಹಕಾರ ಸಹಾಯ ಹಾಗೂ ಸಹಕಾರಿ ಮಾರ್ಗದರ್ಶನದಿಂದಲೇ ಸಾಧ್ಯ. ಸ್ವಯಂ ಪ್ರೇರಣೆಯಿಂದಲೇ ಸ್ವಯಂ ಶ್ರೇಯೋಭಿವೃದ್ಧಿಗಳಿಸುವ ಸಾಧನವಿದು. ಇಲ್ಲಿ ಪರಸ್ಪರ ಅರಿವು, ಪರಸ್ಪರ ನೆರವು ಇದೇ ಮುಖ್ಯ. ಈ ಕ್ಷೇತ್ರದಲ್ಲಿ ಸಹಕಾರದ ನಿಯಂತ್ರಣಕ್ಕೆ ಅವಕಾಶವಿಲ್ಲ. ಒಳ್ಳೆಯದಕ್ಕೆ ಆಗಲಿ, ಸಹಕಾರ ಕ್ಷೇತ್ರದಲ್ಲಿ ಸರಕಾರದ ಹತೋಟಿಗೆ ಪ್ರಯತ್ನಿಸಿದಲ್ಲಿ ಅದು ಸಹಕಾರವೇ ಅಲ್ಲ ಅದು ಇನ್ನೇನೋ ಎನ್ನಬೇಕಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ಒತ್ತಿ ಒತ್ತಿ ಹೇಳಿದ್ದಾರೆ.

ಚಳುವಳಿಯ ಬಗ್ಗೆ ಸಾಕಷ್ಟು ತಿಳುವಳಿಕೆ ಎಲ್ಲೆಡೆಯಲ್ಲೂ ಒದಗಿಸಬೇಕು. ಅದಕ್ಕಾಗಿ ಯುವಕರಿಗೆ ಗ್ರಾಮಾಂತರ ಜನರಿಗೆ ತರಬೇತಿ ವ್ಯವಸ್ಥೆಯನ್ನು ಕೈಗೊಳ್ಳಬೇಕು ಗ್ರಾಮದ ಕಾರ್ಯಕರ್ತರಿಗೆ ಸಂಸ್ಥೆಯನ್ನು ನಡೆಸುವ ಜವಾಬ್ದಾರಿಯ ಕುರಿತಾಗಿ ಲೆಕ್ಕಪತ್ರಗಳನ್ನಿಡುವ ವಿಷಯ ಹಾಗು ಸಂಘಗಳು ತಮ್ಮ ವ್ಯವಹಾರಗಳನ್ನು ಸುವ್ಯವಸ್ಥಿತವಾಗಿ ಕೈಗೊಳ್ಳುವಂತೆ ತರಬೇತಿ ದೇಶದಾದ್ಯಂತ ಆಗಬೇಕೆಂದೂ ಅವರು ಸೂಚಿಸಿದ್ದರು.

ಕಾಯಿದೆಗಳಿಗೆ ತಿದ್ದುಪಡಿ ಮಾಡಲಾಗುತ್ತದ್ದು. ಸಹಕಾರ ಕಾಯಿದೆಯೇ ವಿಕೃತಿಗೊಂಡಿದ್ದು, ಚಳುವಳಿಯ ಸ್ವತಂತ್ರ ಆರ್ಥಿಕ ವ್ಯವಸ್ಥೆಯಾಗಿ ಗ್ರಾಮಾಂತರ ಜನತೆಯ ಹಿತಸಾಧಿಸುವ ಚಳುವಳಿಯಾಗಿ ಮುನ್ನಡೆಯಲು ಅಸಾಧ್ಯವೆಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸರಕಾರದ ಹಿಡಿತದಿಂದ ಸಹಕಾರ ಕ್ಷೇತ್ರವನ್ನು ಹೊರತಾಗಿಸುವ ಬದಲಾಗಿ ಸರಕಾರದ ಬಿಗಿಮುಷ್ಟಿ ಇನ್ನಷ್ಟು ಹೆಚ್ಚುವಂತಹ ಸ್ಥಿತಿ ನಿರ್ಮಾಣವಾಗಿದೆ, ಆಗುತ್ತಿದೆ.

ರಾಜಕೀಯಕ್ಕೆ ಸಹಕಾರ ಕ್ಷೇತ್ರದಲ್ಲಿ ಎಳ್ಳಷ್ಟೂ ಅವಕಾಶ ನೀಡಬಾರದೆಂಬುದು ನೆಹರೂರವರ ಅಪೇಕ್ಷೆಯಾಗಿತ್ತು.

ಚಳುವಳಿಯ ಸ್ವರೂಪ ನೆಹರೂರವರು ನಮ್ಮ ಮುಂದಿಟ್ಟ ಸ್ವಯಂಪೂರ್ಣ ಸ್ವಾಯತ್ತ ಆರ್ಥಿಕ ಉನ್ನತಿ ಸಾಧನೆಯ ಘಟಕವಾಗುವಂತೆ ಅನುಕೂಲಕರ ವಾತಾವರಣ ನಿರ್ಮಾಣವಾಗಬೇಕು. ಈ ದಿಸೆಯಲ್ಲಿ ಸಂಘಟನೆಗಳು, ಚಳುವಳಿಯಲ್ಲಿ ಆಸಕ್ತಿಯುಳ್ಳವರು, ನಿಷ್ಠಾವಂತ ಕಾರ್ಯಕರ್ತರು ಹಾಗೂ ಸರಕಾರ ಹೊಸ ಚಿಂತನೆ ಮಾಡುವುದು ತೀರಾ ಅವಶ್ಯ. ಶೇಕಡಾ 70 ಕ್ಕೂ ಮಿಕ್ಕಿದ ಗ್ರಾಮಾಂತರ ಜನಸ್ತೋಮದ ಸರ್ವತೋಮುಖ ಅಭಿವೃದ್ಧಿ ಸಾಧನೆಯ ಮೂಲ ಸ್ಥಂಭಗಳಾಗಿ ಗ್ರಾಮಕ್ಕೊಂದು ಪಂಚಾಯತ್ ಸಹಕಾರ ಸಂಘ ಹಾಗೂ ಪ್ರಾಥಮಿಕ ಶಾಲೆ ಸ್ಥಾಪನೆಯಾಗಬೇಕೆಂಬ ನೆಹರೂ ಆಶಯ ಫಲಿಸುವ ದಿನ ಬೇಗನೆ ಬರಲಿ ಎಂದು ಹಾರೈಸೂಣ.

ಜೈ ಹಿಂದ್ ಜೈ ಸಹಕಾರ

**ಶಂಕರ ಹೆಗಡೆ,** ಸಹಕಾರಿ ಸಲಹೆಗಾರರು, ತುಮಕೂರು.

# ತುಮಕೂರಿನಲ್ಲಿ ವಿಜಯ ಕೀರ್ತಿ ಸೌಹಾರ್ದ ಪತ್ತಿನ ಸಹಕಾರಿಯ ಉದ್ಘಾಟನೆ

ತುಮಕೂರಿನಲ್ಲಿ ವಿಜಯ ಕೀರ್ತಿ ಸೌಹಾರ್ದ ಪತ್ತಿನ ಸಹಕಾರಿಯ ಉದ್ಘಾಟನೆಯನ್ನು ತುಮಕೂರಿನ ಹಿರೇಮಠದ ಮಠಾಧ್ಯಕ್ಷರಾದ ಡಾ॥ ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮೀಜಿಯವರು ನೆರವೇರಿಸಿ, ಆರ್ಥಿಕ ರಂಗವನ್ನು ಸದೃಢಗೊಳಿಸುವಲ್ಲಿ ಸಹಕಾರಿ ಸಂಘ ಸಂಸ್ಥೆಗಳು ಪ್ರಮುಖವಾದ ಪಾತ್ರವನ್ನು ವಹಿಸಿದೆ. ಈ ದೆಸೆಯಲ್ಲಿ ಜಿಲ್ಲೆಯಲ್ಲಿ ಹೆಚ್ಚು ಹೆಚ್ಚು ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಅಸ್ತಿತ್ವಕ್ಕೆಬರುತ್ತಿದ್ದು ಈ ಸಂಸ್ಥೆಗಳಲ್ಲಿ ಪ್ರಾಮಾಣಿಕ ಹಾಗೂ ತತ್ವನಿಷ್ಠ ಜನರು ಪ್ರವೇಶಿಸಬೇಕೇಂದು ಕರೆ ನೀಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಂ. ಜಿ. ತಿಮ್ಮರಾಜುರವರು ವಹಿಸಿದ್ದರು. ಉದ್ಯಮಿ ಶ್ರೀ ಎನ್. ಮೋಹನ್ ಕುಮಾರ್ , ಸಹಕಾರಿಯ ಪ್ರವರ್ತಕ ಶ್ರೀ ಸುರೇಶ್‌ಕುಮಾರ್, ವಿದ್ವಾನ್ ಶ್ರೀ ಎಂ.ಜಿ. ಸಿದ್ದರಾಮಯ್ಯ, ಮಿಮಿಕ್ರಿ ಈಶ್ವರಯ್ಯ, ಮುಖ್ಯ ಪ್ರವರ್ತಕ ಶ್ರೀ ಡಿ.ಆರ್ ಶಿವಶಂಕರಯ್ಯ ಸಹಕಾರಿ ಸಲಹೆಗಾರ ಶ್ರೀ ಶಂಕರ್ ಹೆಗಡೆ ಹಾಗೂ ಅನೇಕ ಸಹಕಾರಿ ಗಣ್ಯರು ಹಾಗೂ ಸಹಕಾರಿಗಳು ಭಾಗವಹಿಸಿದ್ದರು.




# ಶ್ರೀ ಅರಿಹಂತ ಸೌಹಾರ್ದ ಸಹಕಾರಿಯ 17ನೇ ಶಾಖೆ ಧಾರವಾಡ ಜಿಲ್ಲೆಯಲ್ಲಿ ಪ್ರಾರಂಭ



ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿಯ 17 ನೇ ಶಾಖೆಯ ಉದ್ಘಾಟನೆಯನ್ನು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಮಹಾಪೌರ ಶ್ರೀಮತಿ ಪೂರ್ಣ ಸುಧೀರ ಪಾಟೀಲ್ ನೆರವೇರಿಸಿದರು. ಎಸ್‌ಡಿಎಂ ಸಂಸ್ಥೆಯ ಉಪಾಧ್ಯಕ್ಷ ಶ್ರೀ ಧರ್ಮಸ್ಥಳ ಸುರೇಂದ್ರ ಕುಮಾರ್, ಚೇಂಬರ್ ಆಫ್ ಕಾಮರ್ಸ್ ಹುಬ್ಬಳ್ಳಿಯ ಶ್ರೀ ನಿರ್ಮಾಲ ಕುಮಾರ್ ಪಿ. ಜವಳಿ, ಹುಬ್ಬಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಶ್ರೀ ರತ್ನ ಡೋರ್ಲೆ, ಶ್ರೀ ಮಹಾವೀರ ಡಿ ದಾನೋಳ್ಳಿ, ಶ್ರೀ ಸುಭಾಷ್ ವಿ.ಶೆಟ್ಟಿ, ಸಂಸ್ಥೆಯ ಅಧ್ಯಕ್ಷ ಶ್ರೀರಾವ್ ಸಾಹೇಬ್ ಪಾಟೀಲ್ ಮುಂತಾದವರು ಇದ್ದಾರೆ.

ಬೆಳಗಾವಿ ಜಿಲ್ಲೆಯ ಪ್ರತಿಷ್ಠಿತ ಅರಿಹಂತ ಸೌಹಾರ್ದ ಸಹಕಾರಿಯ 17ನೇ ಶಾಖೆಯನ್ನು ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಮಹಾಪೌರ ಶ್ರೀಮತಿ ಪೂರ್ಣ ಸುಧೀರ ಪಾಟೀಲರವರು ಉದ್ಘಾಟಿಸಿ ಶುಭಹಾರೈಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷ ಶ್ರೀ ರಾವ್ ಸಾಹೇಬ ಪಾಟೀಲರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಎಸ್‌ಡಿಎಂ ಸಂಸ್ಥೆಯ ಉಪಾಧ್ಯಕ್ಷ ಶ್ರೀ ಧರ್ಮಸ್ಥಳ ಸುರೇಂದ್ರ ಕುಮಾರ್, ಚೇಂಬರ್ ಆಫ್ ಕಾಮರ್ಸ್ ಹುಬ್ಬಳ್ಳಿಯ ಶ್ರೀ ನಿರ್ಮಾಲ ಕುಮಾರ್ ಪಿ. ಜವಳಿ ಹುಬ್ಬಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಶ್ರೀ ರತ್ನ ಡೋರ್ಲೆ, ಶ್ರೀ ಮಹಾವೀರ ಡಿ ದಾನೋಳ್ಳಿ, ಶ್ರೀ ಸುಭಾಷ್ ವಿ.ಶೆಟ್ಟಿ, ಸಂಸ್ಥೆಯ ಅಧ್ಯಕ್ಷ ಶ್ರೀರಾವ್ ಸಾಹೇಬ್ ಪಾಟೀಲ್ ಮುಂತಾದವರು ಭಾಗವಹಿಸಿದ್ದರು. ಈ ಸಹಕಾರಿಯು ರಾಜ್ಯದ ಪ್ರಮುಖ ಸೌಹಾರ್ದ ಸಹಕಾರಿಯಾಗಿದ್ದು ಸಂಸ್ಥೆಯಲ್ಲಿ 31–3–2011ಕ್ಕೆ ಸದಸ್ಯರ ಸಂಖ್ಯೆ–5691, ಶೇರುಬಂಡವಾಳ 1 ಕೋಟಿ 93 ಲಕ್ಷ, ಠೇವುಗಳು 135ಕೋಟಿ 37ಲಕ್ಷ, ನಿಧಿಗಳು 10 ಕೋಟಿ 66ಲಕ್ಷ, ಹೂಡಿಕೆಗಳು 81ಕೋಟಿ 10ಲಕ್ಷ, ಸಾಲಗಳು 64 ಕೋಟಿ 39ಲಕ್ಷ, ಇದ್ದು ಪ್ರಸಕ್ತ ಸಾಲಿಗೆ 1 ಕೋಟಿ42 ಲಕ್ಷ ಲಾಭ ಗಳಿಸಿದೆ.



## ಹಂಪಿಯಲ್ಲಿ ಡಿಸೆಂಬರ್ 2011ರಂದು ಸೌಹಾರ್ದ ಸಹಕಾರಿ ಸಿಬ್ಬಂದಿಗಳ 6ನೇ ತಂಡದ ತರಬೇತಿ ಕಾರ್ಯಕ್ರಮ

ಸುಪ್ರಸಿದ್ಧ ಐತಿಹಾಸಿಕ ಹಾಗೂ ಪ್ರವಾಸಿ ತಾಣ "ಹಂಪಿ"ಯಲ್ಲಿ ಡಿಸೆಂಬರ್ 2011 ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 6 ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ಇದೇ ಡಿಸೆಂಬರ್ 2011 ರಲ್ಲಿ ಸುಪ್ರಸಿದ್ಧ ಐತಿಹಾಸಿಕ ಹಾಗೂ ಪ್ರವಾಸಿ ತಾಣ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾನಿಲಯದ ಸುಸಜ್ಜಿತ, ಆಧುನಿಕ ಸೌಲಭ್ಯಗಳಿರುವ ಹಾಗೂ ಉತ್ತಮ ಪರಿಸರದಲ್ಲಿ ಏರ್ಪಡಿಸಲಾಗುತ್ತಿದೆ.

"ಸಂಪೂರ್ಣ ವ್ಯಕ್ತಿತ್ವ ವಿಕಸನ"ದ 10 ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಂದೇ ನಿಮ್ಮ ಸೀಟನ್ನು ಕಾಯ್ದಿರಿಸಿ. ಲಭ್ಯವಿರುವ ಸೀಟುಗಳು. 40 ಮಾತ್ರ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ. ಪ್ರವೇಶ ಫೀ ತಲಾ ರೂ 5000/–ಗಳು. ಹೆಚ್ಚಿನ ವಿವರಗಳಿಗೆ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ.

## ನವೆಂಬರ್ 2011ರ ತರಬೇತಿ ಕಾರ್ಯಕ್ರಮಗಳು

ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ, ಸಹಕಾರಿಗಳಲ್ಲಿನ ಹಿರಿಯ ಅಧಿಕಾರಿಗಳಿಗೆ ಮತ್ತು ಮಾರಾಟಾಧಿಕಾರಿಗಳಿಗಾಗಿ "ಸಾಲ ಪತ್ರ ದಾಖಲಾತಿ ಹಾಗೂ ವಸೂಲಾತಿ ಕ್ರಮಗಳು ಇದರ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ.

**1) ದಿನಾಂಕ: 22.11.2011** ರಂದು ಮೈಸೂರು (ಮೈಸೂರು ವಿಭಾಗದ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ ಉಡುಪಿ, ಹಾಸನ,ಚಿಕ್ಕಮಗಳೂರು ಜಿಲ್ಲೆಗಳ ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಅಧಿಕಾರಿಗಳು)

**2) ದಿನಾಂಕ 28.11.2011** ರಂದು ಬೆಂಗಳೂರು (ಬೆಂಗಳೂರು ವಿಭಾಗದ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಅಧಿಕಾರಿಗಳು)

**ಪ್ರತಿನಿಧಿ ಶುಲ್ಕ :** ತಲ ರೂ.100. ಭಾಗವಹಿಸುವ ಪ್ರತಿನಿಧಿಗಳು ಕಡ್ಡಾಯವಾಗಿ, ಮುಂಚಿತವಾಗಿ ತಿಳುಹಿಸಿ ವ್ಯವಸ್ಥೆಗಳಿಗೆ ಸಹಕರಿಸಲು ಕೋರಿದೆ.

# ತೀರ್ಥಹಳ್ಳಿಯ ಕವಲೇದುರ್ಗ ಬಹುಉದ್ದೇಶಿತ ಸೌಹಾರ್ದ ಸಹಕಾರಿಯಲ್ಲಿ ಸರ್ವಸದಸ್ಯರ ಸಭೆ ಹಾಗೂ ಈಜಿ ಮನಿ ಯೋಜನೆ

ತೀರ್ಥಹಳ್ಳಿ ಸೆ.26ರಂದು ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾದ ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿಯ 2010–11ನೇ ಸಾಲಿನ ಸರ್ವಸದಸ್ಯರ ಸಭೆಯು ತೀರ್ಥಹಳ್ಳಿಯ ಬಂಟರ ಭವನದಲ್ಲಿ ನಡೆಯಿತು.

ಸಹಕಾರಿಯ ಗೌರವಾಧ್ಯಕ್ಷರಾದ ರಾಜಗುರು ಡಾ॥ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಸಹಕಾರಿಯ ಆಧ್ಯಕ್ಷರಾದ ಶ್ರೀ ಎಂ.ಎಂ.ಲಕ್ಷ್ಮೀನಾರಾಯಣರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿದ್ದು, ಶಿವಮೊಗ್ಗ ಮತ್ತು ಜಿಲ್ಲೆಯ ಇನ್ನಿತರ ಸ್ಥಳಗಳಲ್ಲಿ ಸಹಕಾರಿಯ ಶಾಖೆಗಳನ್ನು ತೆರೆಯಲು ತೀರ್ಮಾನಿಸಲಾಯಿತು.



ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಎಂ.ಎಂ.ಲಕ್ಷ್ಮೀ ನಾರಾಯಣ್ ಮಾತನಾಡಿ ಸಹಕಾರಿಯ ಶಾಖೆಗಳನ್ನು ತೆರೆಯಲು ತೀರ್ಮಾನಿಸಲಾಯಿತು. ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಎಂ.ಎಂ. ಲಕ್ಷ್ಮೀನಾರಾಯಣ್ ಮಾತನಾಡಿ ಸಹಕಾರಿಯು ಈಗಾಗಲೇ ನಡಿಸುತ್ತಿರುವ ಬ್ಯಾಂಕಿಂಗ್ ಇತರೆ ಯೋಜನೆಗಳನ್ನು ರೂಪಿಸಿದ್ದು ಇದರ ಸೌಲಭ್ಯಗಳನ್ನು ಪಡೆಯಲು ತಿಳಿಸಿದರು.ಕುಮಾರಿ ನಯನ ಮತ್ತು ಸಂಗಡಿಗರ ಪ್ರಾರ್ಥನೆಯೊಂದಿಗೆ ಸಭೆಯು ಆರಂಭಗೊಂಡು. ಸಹಕಾರಿ ಉಪಾಧ್ಯಕ್ಷ ಶ್ರೀ ಕೂಳೂರು ಸತ್ಯ ನಾರಾಯಣ್‌ರಾವ್ ಸ್ವಾಗತಿಸಿದರು.

ಶ್ರೀ ಡಿ.ಎಂ.ಮನುದೇವ್ ಸೂಚನಾ ಪತ್ರವನ್ನು ಹಾಗೂ ಶ್ರೀ ಎ.ಕೆ. ಶ್ರೀನಿವಾಸಮೂರ್ತಿ ಹಿಂದಿನ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ಓದಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ನೆಂಪೆ ಮಂಜುನಾಥ್, ಆಡಳಿತ ವರದಿಯನ್ನು ಮಂಡಿಸಿದ್ದು, ಶ್ರೀ ಕಟ್ಟೇಗದ್ದೆ ಹಾಲಪ್ಪನವರು ಲೆಕ್ಕಾಚಾರದ ತಃಖ್ತೆಗಳನ್ನು ಮಂಡಿಸಿದರು. ಶ್ರೀಮತಿ ಹೇಮಾವಾಸುದೇವ್ರವರು ಆಡಿಟ್ ವರದಿಯನ್ನು, ಶ್ರೀ.ಕೆ.ಎ. ನಜೀರಹಮದ್ದರವರು ಅಂದಾಜು ಆಯ–ವ್ಯಯವನ್ನು ಮಂಡಿಸಿದರು.

ಶ್ರೀ ಸಿ.ಎಸ್. ಚಂದ್ರಶೇಖರ್‌ರವರು ಸರ್ವರಿಗೂ ವಂದಿಸಿದರು. ಇದೆ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀ.ಸಿಎಸ್.ಚಂದ್ರಶೇಖರ್ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಸದಸ್ಯರಾಗಿ ನೇಮಕಗೊಂಡಿರುವುದಕ್ಕಾಗಿ ಅಭಿನಂದಿಸಲಾಯಿತು.



ಕವಲೇದುರ್ಗಾ ಬಹು ಉದ್ದೇಶಿ ಸಹಕಾರಿಯಲ್ಲಿ ಸಿಫಿನ್ ಸಂಸ್ಥೆಯ ಈಜಿ ಮನಿ ಯೋಜನೆಯ ಮಾಹಿತಿ ಮತ್ತು ಸಂವಾದ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಹಾಗೂ ಸುಕೊ ಬ್ಯಾಂಕ್ ಅಧ್ಯಕ್ಷ ಶ್ರೀ ಮನೋಹರ್ ಮಸ್ಕಿರವರು ಉದ್ಘಾಟಿಸಿ, ಇದೊಂದು ವಿನೂತನ ಮಾದರಿಯಾ ಕೇವಲ ಸಹಕಾರ ಸಂಸ್ಥೆಗಳು ಮತ್ತು ಬ್ಯಾಂಕಿಂಗ್ ಸಂಸ್ಥೆಗಳು ನಿರ್ವಹಿಸಬಹುದಾದ ಚಿಟ್ ಫಂಡ್, ಆರ್‌ಡಿ, ಓಒರ್‌ಡ್ರಾಫ್ಟ್ ಸೌಲಭ್ಯಗಳ ಮಿಶ್ರಿತ ಯೋಜನೆಯಾಗಿದೆ ಸದಸ್ಯರಿಗೆ ಹೆಚ್ಚು ಲಾಭದಾಯಕವಾಗಿದೆ ಎಂದು ತಿಳಿಸಿ ಸಂವಾದದ ಮೂಲಕ ಹೆಚ್ಚಿನ ವಿವರ ನೀಡಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎಂ.ಪಿ.ಎಂ. ಅಧ್ಯಕ್ಷ ಶ್ರೀ ಅರಗಜ್ಞಾನೇಂದ್ರರವರು ಜನಸಾಮನ್ಯರಿಗೆ ಅನುಕೂಲವಾಗುವಂತಹ ಅನೇಕ ವಿನೂತನ ಯೋಜನೆಗಳನ್ನು ಪರಿಚಯಿಸಿ ಕಾರ್ಯಗತ ಗೊಳಿಸುತ್ತಿರುವ ಈ ಸಹಕಾರಿಗೆ ಶುಭಹಾರೈಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷ ಶ್ರೀ ಎಂ.ಎಂ. ಲಕ್ಷ್ಮಿನಾರಾಯಣ್‌ರವರು ವಹಿಸಿದ್ದರು. ಸಿಫಿನ್ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಯು.ಹೆಚ್. ರಾಮಪ್ಪನವರು ಮಾತನಾಡಿದರು. ರಾಜಗುರು ಡಾ॥ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸನ್ನಿಧಿಯಲ್ಲಿ ಈ ಕಾರ್ಯಕ್ರಮ ನೆಡೆಯಿತು.



**ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿಯಿಂದ ದೇಣಿಗೆ :** ತಾಳಿಕೋಟೆಯ ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿಯ ನಿರ್ದೇಶ ಬಸವರಾಜ ಹೂಗಾರ್ ಕಿಡ್ನಿ ಚಿಕಿತ್ಸೆಗೆಂದು 25,000 ರೂ. ದೇಣಿಗೆ ಹಾಗೂ ಸಾರ್ವಜನಿಕರು ಸಹಾಯದಿಂದ ಎರಡು ಲಕ್ಷ ರೂಪಾಯಿಗಳ ದೇಣಿಗೆ ನೀಡಿ ಚಿಕಿತ್ಸೆ ಫಲಕಾರಿಯಾಗಲೆಂದು ಹಾರೈಸಿದ್ದಾರೆ.



ಧಾರವಾಡ ದೈವಜ್ಞ ಪತ್ತಿನ ಸೌಹಾರ್ದ ಸಹಕಾರಿಯು ದಿನಾಂಕ : 24.09.11 ರಂದು 14ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದೈವಜ್ಞ ಸಮಾಜದ ಸಭಾಭವನದಲ್ಲಿ ನಡೆಯಿತು.



# ಭಾರತೀಯ ಆಡಿಟ್- ಮನ್ನಣೆ ಮತ್ತು ಮಾರ್ಗದರ್ಶನ

**ಎಚ್. ಶಿವಕುಮಾರ್**
ಚಾರ್ಟೆಡ್ ಅಕೌಂಟೆಂಟ್
shivakumar.h@icai.org

ಇದೇ ಅಕ್ಟೋಬರ್ 1 ರಂದು ಎರಡು ಮುಖ್ಯ ಸಂಗತಿಗಳು ಘಟಿಸಿವೆ. 1) 2011–12 ನೇ ಸಾಲಿನ ಸುತ್ತೋಲೆ 5ರ ಪ್ರಕಾರ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳನ್ನು ಪ್ರಕಟಿಸಿದ್ದು. 2) ವಿಯೆನ್ನಾದಲ್ಲಿರುವ ಅಂತರಾಷ್ಟ್ರೀಯ ಅಣುಶಕ್ತಿ ಸಂಸ್ಥೆ ಮತ್ತು ಜಿನೇವಾದಲ್ಲಿರುವ ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆಗಳಿಗೆ ಪ್ರಪ್ರಥಮ ಬಾರಿಗೆ ಭಾರತೀಯ ಮಹಾಲೇಖಪಾಲ ಸಂಸ್ಥೆಯನ್ನು ಲೆಕ್ಕಪರಿಶೋಧಕರನ್ನಾಗಿ ಆಯ್ಕೆಮಾಡಿದ್ದು.

ಮೊದಲನೇಯದು ಸೌಹಾರ್ದ ಸಹಕಾರಿಗಳಿಗೆ ನೇರವಾಗಿ ಸಂಬಂಧಿಸಿದ್ದುದಾದರೆ ಎರಡನೆಯ ಸಂಗತಿ ಭಾರತೀಯ ಲೆಕ್ಕಪರಿಶೋಧನೆಯ ಪರಂಪರೆಗೆ ಅಂತರಾಷ್ಟ್ರೀಯ ಮನ್ನಣೆ ದೊರಕಿದ ಸಂತಸದ ಸಮಾಚಾರ.

ಈ ಎರಡೂ ಘಟನೆಗಳನ್ನು ಮೇಳೈಸಿ ಗಮನಿಸಿದರೆ ಸಾರ್ವತ್ರಿಕವಾಗಿ ಸಂಗ್ರಹಿಸಿದ ಹಣವನ್ನು ಸ್ವತಂತ್ರ ಮತ್ತು ಸದೃಢವಾದ ಲೆಕ್ಕಪರಿಶೋಧನಾ ಸಂಘಟನೆ ಮೂಲಕ ಸಂರಕ್ಷಿಸಬೇಕಾಗಿರುವ ಅಗತ್ಯ ಇಂದಿನ ಸ್ಥಿತಿಯಲ್ಲಿ ಅಂದರೆ ಭ್ರಷ್ಟಾಚಾರ ವಿರೋಧಿ ಅಲೆಯಲ್ಲಿ ತೇಲುತ್ತಿರುವ ಭಾರತದ ಮಟ್ಟಿಗೆ ಎಷ್ಟಿದೆ ಎಂಬುದರ ಅರಿವು ಮೂಡಿಸುತ್ತಿದೆ.

ಸುತ್ತೋಲೆ 5ರ ಪ್ರಕಾರ ಲೆಕ್ಕ ಪರಿಶೋಧಕರ ನೇಮಕಾತಿಯನ್ನು ಸರ್ವಸದಸ್ಯರ ಸಭೆಯಲ್ಲಿ ಮಾಡಬೇಕು. ವಿನಃ ಆಡಳಿತ ಮಂಡಳಿಯಲ್ಲಿ ಅಲ್ಲ. ಹೀಗೆ ಸದಸ್ಯರಿಂದ ನೇಮಕವಾದ ಲೆಕ್ಕಪರಿಶೋಧಕರನ್ನು ತದನಂತರ ಯಾವುದೇ ಕಾರಣಕ್ಕಾಗಿಯೂ ಬದಲಿಸುವ ಅಧಿಕಾರ ಆಡಳಿತ ಮಂಡಳಿಗಿರುವುದಿಲ್ಲ. ಆಂದರೆ ಆಡಳಿತ ಮಂಡಳಿಯು ತಮ್ಮ ಆಯ್ಕೆಯ ಲೆಕ್ಕಪರಿಶೋಧಕರನ್ನು ಆರಿಸಿಕೊಂಡು ತಮ್ಮ ಅನುಕೂಲಕ್ಕೆ ಆಡಿಟ್ ಎಂಬ ವ್ಯವಸ್ಥೆಯನ್ನು ಉ(ದುರು)ಪಯೋಗಿಸಿಕೊಳ್ಳುವ ಅಪಾಯಕಾರಿ ಆಸ್ಪದಗಳಿಗೆ ಈ ಮಾರ್ಗದರ್ಶಿಯಿಂದ ಕಡಿವಾಣ ಬಿದ್ದಂತಾಗಿರುತ್ತದೆ. ಹಾಗೆಯೇ ಮೂರು ವರ್ಷಗಳಿಗೂ ಹೆಚ್ಚು ಕಾಲ ಒಬ್ಬರೇ ಅಥವಾ ಒಂದೇ ಲೆಕ್ಕಪರಿಶೋಧಕ ಸಂಸ್ಥೆಯಿಂದ ಆಡಿಟ್ ನಡೆಸುವ ಪರಿಪಾಟವನ್ನು ನಿಲ್ಲಿಸಬೇಕೆಂದು ಸುತ್ತೋಲೆಯ ಮಾರ್ಗದರ್ಶಿ ತಿಳಿಸುತ್ತದೆ.

ಸ್ವತಂತ್ರತೆ, ನ್ಯಾಯನಿಷ್ಠುರತೆ, ನಂಬಲರ್ಹ ನಡವಳಿಕೆ, ವೃತ್ತಿ ಪರಿಣಿತಿ, ಪಾರದರ್ಶಕತೆ ಮತ್ತು ಸಕಾರಾತ್ಮಕ ಧೋರಣೆಗಳು ತಾನು ಅನುಸರಿಸುತ್ತಿರುವ ಮೌಲ್ಯಗಳೆಂದು ಭಾರತೀಯ ಲೇಖಪಾಲ ಸಂಸ್ಥೆಯು ತನ್ನ ಸನ್ನದಿನಲ್ಲಿ ಹೇಳಿಕೊಂಡಿದೆ. ಭಾರತೀಯ ಲೇಖಪಾಲ ಸಂಸ್ಥೆಯು ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಗಳಿಸಬೇಕಾದರೆ ಈ ಮೌಲ್ಯಗಳ ಅನುಷ್ಠಾನವೇ ಆಧಾರವಾಗಿದೆಯೇ ಹೊರತು ಬೇರೆ ಯಾವುದೇ ವಶೀಲಿ, ಪ್ರಭಾವ ಅಥವಾ ಅಧಿಕಾರಗಳಲ್ಲ. ಭಾರತೀಯ ಲೇಖಪಾಲ ಸಂಸ್ಥೆಯು ಯಾವ ಮೌಲ್ಯಗಳ ಆಧಾರದ ಮೇಲೆ ಆಡಿಟ್ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದೆಯೇ ಅದೇ ದಿಕ್ಕಿನಲ್ಲಿ ಮುನ್ನಡೆಯಲು ಸೌಹಾರ್ದ ಸಹಕಾರಿಯ ಸುತ್ತೋಲೆ ಸಂಖ್ಯೆ 5 ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲದು. ಈ ದೃಷ್ಟಿಯಲ್ಲಿ ಸುತ್ತೋಲೆಯ ಮಾರ್ಗದರ್ಶಿಗಳು ಒಂದು ಆರಂಭಿಕ ಪ್ರಯತ್ನವೇ ಹೊರತು ಅಂತ್ಯವಲ್ಲ.



ಸಾರ್ವಜನಿಕ ಹಿಂದೆ ಸದ್ಬಳಕೆ ಮತ್ತು ಉದ್ದೇಶಿತ ಬಾಬ್ತುಗಳಿಗಾಗಿಯೇ ಹಣದ ವಿನಿಯೋಗವಾಗುತ್ತಿರುವುದನ್ನು ಸರ್ಕಾರಕ್ಕೆ, ಜನತೆಗೆ ಖಾತ್ರಿ ಮಾಡಿಕೊಡುವ ಗುರುತರವಾದ ಜವಾಬ್ದಾರಿಯನ್ನು ತಾನು ಹೊತ್ತುಕೊಂಡಿರುವುದಾಗಿ ಭಾರತೀಯ ಲೇಖಪಾಲ ಸಂಸ್ಥೆಯು ತನ್ನ ಸನ್ನದಿನಲ್ಲಿ ಹೇಳುತ್ತದೆ. ಕ.ಸೌ.ಸ ಅಧಿನಿಯಮ 1997ರ ಕಲಂ 53ರ ಪ್ರಕಾರ ರಚಿತವಾದ ಸಂಯುಕ್ತ ಸಹಕಾರಿಯು ಇದೇ ತೆರನಾದ ಗುರುತರವಾದ ಜವಾಬ್ದಾರಿಯನ್ನು ಹೊತ್ತುಕೊಂಡಿರುವ ಸಂಸ್ಥೆ ಎಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಸಂಯುಕ್ತ ಸಹಕಾರಿಯು ಹೊರಡಿಸಿರುವ ಆಡಿಟ್ ಮಾರ್ಗದರ್ಶಿಗಳು ಸರ್ವ ಸಮ್ಮತವಾಗಿ ಜಾರಿಯಾಗಬೇಕು.

ಸಾರ್ವಜನಿಕ ಕ್ಷೇತ್ರದ ಲೆಕ್ಕ ನಿರ್ವಹಣೆ ಮತ್ತು ಲೆಕ್ಕಪರಿಶೋಧನೆಯ ವಿಷಯದಲ್ಲಿ ಉತ್ಕೃಷ್ಟ ನಡವಳಿಕೆಗಳನ್ನು ರೂಢಿಸಿಕೊಳ್ಳುವುದು, ಸಾರ್ವಜನಿಕ ಹಣಕಾಸಿನ ದಕ್ಷ ಆಡಳಿತಕ್ಕಾಗಿ ರೂಪರೇಶೆಗಳನ್ನು ನಿಗಧಿಪಡಿಸಿ, ಅವುಗಳ ಒಟ್ಟಾರೆ ಕಾರ್ಯಫಲಾಫಲಗಳನ್ನು ಸಕಾಲದಲ್ಲಿ ವರದಿಮಾಡಿ ಸಾರ್ವತ್ರಿಕ ಗಮನ ಸೆಳೆಯುವುದು ತನ್ನ ಮುಖ್ಯದೃಷ್ಟಿಯೆಂದು ಭಾರತೀಯ ಲೇಖಪಾಲ ಸಂಸ್ಥೆಯ ಸನ್ನದು ತಿಳಿಸುತ್ತದೆ. ಈ ದೃಷ್ಟಿಕೋನದಿಂದಾಗಿಯೇ ಇಂದು 2ಜಿ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟದಂತಹ ಹಗರಣಗಳು ಸಾರ್ವಜನಿಕರ ಗಮನಕ್ಕೆ ಬರುವಂತಾಗಿದ್ದು, ಭಾರತೀಯ ಲೇಖಪಾಲ ಸಂಸ್ಥೆಯ ದಕ್ಷವಾದ ಆಡಿಟ್ ವಿಧಿವಿಧಾನಗಳು ಜಗತ್ತಿಗೆ ತಿಳಿಯುವಂತಾಗಿದ್ದು ಮತ್ತು ಅದರ ಪರಿಣಾಮವಾಗಿ ಅಂತರಾಷ್ಟ್ರೀಯ ಸಂಸ್ಥೆಗಳಿಗೆ ನಮ್ಮ ದೇಶದ ಲೇಖಪಾಲ ಸಂಸ್ಥೆಯು ಮುಂದಿನ ಆರು ವರ್ಷಗಳ ಅವಧಿಗೆ ಆಡಿಟರ್ ಎಂದು ಆಯ್ಕೆಯಾದದ್ದು. ಇಂತಹ ವೃತ್ತಿಪರ ದೃಷ್ಟಿಕೋನಗಳನ್ನು ರೂಢಿಸಿಕೊಳ್ಳಲು ಪಕ್ಕಾ ವೃತ್ತಿ ಪರರ ಅಗತ್ಯವಿರುತ್ತದೆ. ಲೆಕ್ಕನಿರ್ವಹಣೆ ಮತ್ತು ಲೆಕ್ಕಪರಿಶೋಧನೆಯ ವಿಷಯದಲ್ಲಿ ವೃತ್ತಿಪರ ಶಿಕ್ಷಣ ಮತ್ತು ತಾಂತ್ರಿಕ ತರಬೇತಿಯಿರುವ ಪರಿಣಿತರು ಮಾತ್ರ ಇಂತಹ ದೃಷ್ಟಿಕೋನಗಳನ್ನು ಕಾರ್ಯರೂಪಕ್ಕೆ ತರಬಲ್ಲರು. ಭಾರತೀಯ ಲೇಖಪಾಲ ಸಂಸ್ಥೆಯಲ್ಲಿ ವೃತ್ತಿಪರ ಪರಿಣಿತರ, ಸನ್ನದು ಲೆಕ್ಕಪರಿಶೋಧಕರ ತಂಡವೇ ಕೆಲಸಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಸುತ್ತೋಲೆಯ ಆರನೇ ಕ್ರಮಾಂಕದಲ್ಲಿ ಸೂಚಿಸಿರುವ ಹಾಗೆ ಒಂದು ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ದುಡಿಯುವ ಬಂಡವಾಳ ಹೊಂದಿರುವ ಸಹಕಾರಿಗಳು ಸನ್ನದು ಲೆಕ್ಕಪರಿಶೋಧಕರಿಂದಲೇ ಲೆಕ್ಕಪರಿಶೋಧನೆಯನ್ನು ನಡೆಸುವುದು ಸೂಕ್ತ ಎಂಬ ಮಾರ್ಗಸೂಚಿ ಅತ್ಯಂತ ಸಮಯೋಚಿತ ಮತ್ತು ವೃತ್ತಿಪರ ಚಿಂತನೆಯ ಧ್ಯೋತಕವಾಗಿದೆ.

ಭಾರತೀಯ ಲೆಕ್ಕ ಮತ್ತು ಲೆಕ್ಕ ಪರಿಶೋಧನಾ ಪರಂಪರೆಯು ವಿದೇಶಿಯರಿಂದ ಪುರಸ್ಕಾರಕ್ಕೊಳಗಾಗುವ ಮಟ್ಟದಲ್ಲಿ ಬೆಳೆದಿದೆ ಎಂಬ ಸಂತಸದ ಜೊತೆಜೊತೆ ಯಲ್ಲೇ ನಮ್ಮ ಮತ್ತು ನಮ್ಮ ಸುತ್ತಲಿನ ಜನಪರ ಸಂಘಟನೆಗಳಲ್ಲಿ, ಅದು ಸಹಕಾರಿ, ದತ್ತಿ, ಸ್ತ್ರೀಶಕ್ತಿ, ವಿಮೆ, ಜಲಸಂವರ್ಧನೆಯಂತಹ ಯಾವುದೇ ಕ್ಷೇತ್ರದಲ್ಲಿ ಸಾರ್ವಜನಿಕರ, ಬಡವರ, ತೆರಿಗೆದಾರರ ಹಣದ ದುರ್ಬಳಕೆಯಾಗದಂತೆ ಭಾಗಿಯಾದ ಎಲ್ಲರ ಏಳಿಗೆಗಾಗಿ, ಒಳಿತಿಗಾಗಿ ಒಗ್ಗೂಡಿಸಿದ ಚಿಕ್ಕಾಸೂ ಕೂಡ ಸದ್ವಿನಿಯೋಗವಾಗುವ ಹಾಗೆ ನಮ್ಮ ಆಂತರಿಕ ಲೆಕ್ಕಪತ್ರಗಳ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಲು ಇನ್ನೂ ಹೆಚ್ಚಿನ ಪರಿಣಾಮಕಾರಿ ಲೆಕ್ಕಪರಿಶೋಧನೆಯ ಅವಶ್ಯಕತೆಯಿದೆ. ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ಅಂತಹ ಗಣನೀಯ ಎತ್ತರಕ್ಕೆ ಏರಿಸಲು ಕಾಲದಿಂದ ಕಾಲಕ್ಕೆ ಮಾರ್ಗದರ್ಶಿಗಳನ್ನು ಹೊರಡಿಸಿ ವ್ಯವಸ್ಥೆಯನ್ನು ಸದೃಢಗೊಳಿಸಬೇಕಿದೆ. ಇದು ಇಂದಿನ ತುರ್ತು ಮತ್ತು ಅನುಸರಿಸಬೇಕಾದ ನಿರಂತರ ಕ್ರಿಯೆ. ■

# ಪ್ರಾಮಾಣಿಕತೆಯ ಪ್ರತಿಫಲ



**ಬಿ. ಎ. ಮಹದೇವಪ್ಪ,** ವ್ಯವಸ್ಥಾಪಕ ನಿರ್ದೇಶಕರು, ಡಿ.ಸಿ.ಸಿ. ಬ್ಯಾಂಕ್ ಚಿಕ್ಕಮಗಳೂರು.

ನೋಬಲ್ ಬಹುಮಾನ ಪುರಸ್ಕೃತ, ಭಾರತೀಯ ವಿಜ್ಞಾನಿ ಸರ್ ಸಿ.ವಿ. ರಾಮನ್‌ರವರು ಬೆಂಗಳೂರಿನಲ್ಲಿ ತಮ್ಮ ಸಂಶೋಧನಾ ಕೇಂದ್ರದಲ್ಲಿ ಕೆಲಸ ಮಾಡಲು ಸಂಶೋಧಕರು ಬೇಕೆಂದು ಜಾಹೀರಾತು ನೀಡಿದರು. ನೂರಾರು ಅರ್ಜಿಗಳು ಬಂದಿದ್ದವು, ಅದರಲ್ಲಿ ಆರು ಜನರನ್ನು ಮಾತ್ರ ಕೊನೆಯ ಸಂದರ್ಶನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಸಂದರ್ಶನಕ್ಕೆ ಬಂದ ಈ ಆರು ಜನರನ್ನು ಸರ್ ಸಿ.ವಿ. ರಾಮನ್, ಅವರೇ ಸಂದರ್ಶನ ಮಾಡಿ ಮೂವರನ್ನು ಆರಿಸಿದರು.

ಸಂದರ್ಶನಕ್ಕಾಗಿ ಬಂದಂತಹ ಆರು ಜನರಿಗೆ ಪ್ರವಾಸ ಭತ್ಯೆಯನ್ನು ನೀಡಲಾಯಿತು. ಆ ದಿನ ಸಾಯಂಕಾಲ ರಾಮನ್‌ರವರು ಮನೆಗೆ ಹೊರಡಲು ಕಛೇರಿಯಿಂದ ಹೊರಗೆ ಬಂದರು. ಅಲ್ಲಿಯೇ ನಿಂತಿದ್ದ ಒಬ್ಬ ವ್ಯಕ್ತಿಯನ್ನು ನೋಡಿದರು. ಆ ವ್ಯಕ್ತಿಯು ಬೆಳಿಗ್ಗೆ ಸಂದರ್ಶನಕ್ಕಾಗಿ ಬಂದಿದ್ದವನು. ಆಯ್ಕೆ ಆಗಿರಲಿಲ್ಲ. ಆತ ಸರ್ ಸಿ.ವಿ. ರಾಮನ್‌ರವರನ್ನು ನೋಡಿ ನಮಸ್ಕಾರ ಮಾಡಿದ. ರಾಮನ್‌ರವರು, "ನೀನು ಸಂದರ್ಶನದಲ್ಲಿ ಆಯ್ಕೆಯಾಗಿಲ್ಲ. ಮುಂದಿನ ಸಾರಿ ಪ್ರಯತ್ನಿಸು" ಎಂದರು.

ಇವರು 1953ರಲ್ಲಿ IAS ಅಧಿಕಾರಿಯಾಗಿ, ನೇರ ನಡೆ–ನುಡಿ ಮತ್ತು ಪ್ರಾಮಾಣಿಕತೆಯಿಂದ ಭಾರತ ಸರ್ಕಾರದ ಮಹತ್ವದ ಹುದ್ದೆಗಳಲ್ಲಿ ಕೆಲಸ ಮಾಡಿದವರು. ಗೃಹ ಕಾರ್ಯದರ್ಶಿಗಳಾಗಿ, ಕೇಂದ್ರ ಜಾಗೃತದಳದ ಆಯುಕ್ತರಾಗಿ, ಭಾರತದ ಮಹಾಲೇಖಪಾಲರಾಗಿ ಕೆಲಸ ಮಾಡಿದವರು. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯ ಬೋರ್ಡ್ ಆಫ್ ಆಡಿಟ್ ಅಧ್ಯಕ್ಷರಾಗಿ ಹಾಗೂ ವಿಶ್ವ ಸಂಸ್ಥೆಯ ಪೀಸ್ ಕೀಪಿಂಗ್ ಫೋರ್ಸ್‌ನಲ್ಲಿ ಸೇವೆ ಸಲ್ಲಿಸಿ, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಶ್ರೀ ಸಿ.ಜಿ. ಸೋಮಯ್ಯನವರು, ಭಾರತೀಯ ಆಡಳಿತ ಸೇವೆಗೆ ಸೇರಲು ಅರ್ಜಿಯನ್ನು ಭರ್ತಿ ಮಾಡುವಾಗ "Whether the applicant had at any time been convicted by a court", ಎಂಬ ಕಾಲಂಗೆ ಉತ್ತರಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಪ್ರಕರಣ ಇಲ್ಲಿದೆ...

ಶ್ರೀ ಸಿ.ಜಿ. ಸೋಮಯ್ಯನವರು, ಕಾಲೇಜಿನಲ್ಲಿ ಓದುವಾಗ ಒಂದು ದಿನ ತಮ್ಮ ಸ್ನೇಹಿತರ ಜೊತೆ ಸಿನಿಮಾ ನೋಡಲು ಬಾಡಿಗೆ ಸೈಕಲ್‌ನಲ್ಲಿ ಹೋಗಿರುತ್ತಾರೆ. ಸಿನಿಮಾ ಬಿಡುವಾಗ ರಾತ್ರಿ ಬಹಳ ಹೊತ್ತು ಆಗಿರುತ್ತದೆ. ವಾಪಸ್ಸು ಬರುವಾಗ ಸೈಕಲ್‌ಗೆ ಲೈಟ್ ಇಲ್ಲದೆ ಇರುವುದನ್ನು ಪೋಲಿಸ್ ಕಾನ್‌ಸ್ಟೇಬಲ್ ಗಮನಿಸಿ, ಅವರಿಂದ ದುಡ್ಡು ಕೀಳಲು ಪ್ರಯತ್ನಿಸುತ್ತಾನೆ. ಆದರೆ ಅವರ ಬಳಿ ದುಡ್ಡು ಇಲ್ಲದೆ ಇದ್ದುದರಿಂದ ಅವನು ಅವರನ್ನು ಪೋಲಿಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಕೇಸನ್ನು ದಾಖಲಿಸುತ್ತಾನೆ. ಮಾರನೇ ದಿನ ಎಂಬುದನ್ನು ಅವರ ತಮ್ಮ ಪುಸ್ತಕದಲ್ಲಿ ಈ ರೀತಿ ಹೇಳಿದ್ದಾರೆ. "My honesty in replying to this question was appreciated when I later appeared for the interview".

The Honest Always Stand Alone, ಪುಸ್ತಕವನ್ನು ಓದಿರುವ ಅನೇಕ ಓದುಗರ ಪೈಕಿ ಪಶ್ಚಿಮ ಬಂಗಾಲದ ಮಾಜಿ ರಾಜ್ಯಪಾಲರಾದ ಗೋಪಾಲಕೃಷ್ಣ ಗಾಂಧಿಯವರು ಈ ರೀತಿ ಹೇಳಿದ್ದಾರೆ...

"These are not just the recollections of a fine mind but also those of a suddha chitta (pure mind), CG Somiah belongs to a rate and fast-disappearing species".

ಆಗ ಆ ವ್ಯಕ್ತಿ "ಸರ್, ನಾನು ಕೆಲಸವನ್ನು ಕೇಳುತ್ತಿಲ್ಲ. ತಮ್ಮ ಆಫೀಸ್‌ನಲ್ಲಿ ನನಗೆ ಕೊಟ್ಟ ಪ್ರವಾಸ ಭತ್ಯೆಯಲ್ಲಿ ರೂ.7/–ನ್ನು ಹೆಚ್ಚಿಗೆ ಕೊಟ್ಟಿದ್ದಾರೆ. ನಾನು ವಾಪಸ್ಸು ಕೊಡಲು ಹೋದೆ. ಅಕೌಂಟ್ ಕ್ಲೋಸ್ ಆಗಿದೆ. ನೀವೇ ಇಟ್ಟುಕೊಳ್ಳಿ ಎಂದರು. ಆದರೆ ನನಗೆ ಈ ಹೆಚ್ಚಿನ ಹಣ ಬೇಡ" ಎಂದು ಹೇಳಿದ. ರಾಮನ್‌ರವರು ಆ ಏಳು ರೂಪಾಯಿಗಳನ್ನು ಅವನಿಂದ ವಾಪಸ್ಸು ಪಡೆದು, "ನಾಳೆ ಬೆಳಿಗ್ಗೆ ನನ್ನನ್ನು 10.00 ಗಂಟೆಗೆ ಬಂದು ಕಾಣು" ಎಂದು ಹೇಳಿದರು. ಆ ವ್ಯಕ್ತಿ ಮಾರನೇ ದಿನ ಸರ್ ಸಿ.ವಿ. ರಾಮನ್‌ರವರನ್ನು ಭೇಟಿ ಮಾಡಿದಾಗ, "ನೀನು ಭೌತಶಾಸ್ತ್ರದ ಪರೀಕ್ಷೆಯಲ್ಲಿ ಅನುತ್ತೀರ್ಣನಾದೆ", ಆದರೆ ಪ್ರಾಮಾಣಿಕತೆಯ ಪರೀಕ್ಷೆಯಲ್ಲಿ ಜಯಶಾಲಿ ಆದೆ. ನಿನಗಾಗಿ ಇನ್ನೊಂದು ಹುದ್ದೆ ಸೃಷ್ಟಿಸಿದ್ದೇನೆ, ಅದಕ್ಕೆ ನೀನು ಸೇರಿಕೋ" ಎಂದು ಆದೇಶ ಕೊಟ್ಟರು. ಆ ವ್ಯಕ್ತಿ ಮುಂದೆ ದೊಡ್ಡ ವಿಜ್ಞಾನಿ ಆದ. ಅವನು ಬರೆದ 'ನನ್ನ ಜೀವನದ ಗತಿಯನ್ನು ಬದಲಿಸಿದ ಏಳು ರೂಪಾಯಿಗಳು (Seven rupees that changed the course of my life) ಎಂಬ ಲೇಖನದಲ್ಲಿ ಈ ಘಟನೆಯನ್ನು ಸ್ಮರಿಸಿಕೊಂಡಿದ್ದಾನೆ.

'The Honest Always stand Alone' ಇದು ಒಂದು ಪುಸ್ತಕದ ಹೆಸರು ಇದನ್ನು ಬರೆದವರು ಶ್ರೀ ಸಿ.ಜಿ. ಸೋಮಯ್ಯ. ನ್ಯಾಯಾಧೀಶರ ಮುಂದೆ ಸೋಮಯ್ಯನವರು ಹಾಜರಾಗಿ ತಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಾರೆ. ನ್ಯಾಯಾಧೀಶರು ಒಂದು ರೂಪಾಯಿ ದಂಡವನ್ನು ವಿಧಿಸಿ ಕೇಸನ್ನು ಮುಕ್ತಾಯ ಗೊಳಿಸುತ್ತಾರೆ.

ಶ್ರೀ ಸಿ.ಜಿ. ಸೋಮಯ್ಯನವರು, ಭಾರತೀಯ ಆಡಳಿತ ಸೇವೆಗೆ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಈ ಪ್ರಕರಣವನ್ನು ನೆನಪಿಸಿಕೊಳ್ಳುತ್ತಾರೆ. ಈ ಬಗ್ಗೆ ಏನು ಬರೆಯಬೇಕೆಂದು ತೋಚದೆ ಅವರ ತಂದೆಯವರನ್ನು ಕೇಳುತ್ತಾರೆ. ಆಗ ತಂದೆಯವರು 'ವಿಷಯವನ್ನು ಮುಚ್ಚಿಡದೆ ಪ್ರಾಮಾಣಿಕವಾಗಿ ಬರೆದು ಕಳಿಸು' ಎಂದು ತಿಳಿಸುತ್ತಾರೆ. ಆಗ ಅರ್ಜಿಯಲ್ಲಿ, "owning up to a minor traffic offence when I was a student" ಎಂದು ಬರೆದು ಕಳುಹಿಸುತ್ತಾರೆ. ಅಲ್ಲಿಗೆ ಆ ವಿಷಯವನ್ನು ಮರೆತು ಬಿಡುತ್ತಾರೆ. ಮುಂದೆ ಕಾಲೇಜ್ ಒಂದರಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಾರೆ, ನಂತರ IAS ಪರೀಕ್ಷೆಗೆ ಹಾಜರಾಗುತ್ತಾರೆ. 1953ರ ಜನವರಿ ತಿಂಗಳಿನಲ್ಲಿ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆ ಆಗಿರುವ ಬಗ್ಗೆ ಹಾಗೂ ಸಂದರ್ಶನಕ್ಕಾಗಿ ದೆಹಲಿಗೆ ಬರುವಂತೆ ಕರೆ ಬರುತ್ತದೆ. ಸಂದರ್ಶನವನ್ನು ಯಶಸ್ವಿಯಾಗಿ ಮುಗಿಸಿ ದಿನಾಂಕ 13–02–1953ರಲ್ಲಿ ಅತೀ ಹೆಚ್ಚು ಅಂಕಗಳಿಸಿ 3ನೇ ರ್‍ಯಾಂಕ್ ಪಡೆದು ಆಯ್ಕೆಯಾಗಿರುತ್ತಾರೆ.

ಶ್ರೀ ಸಿ.ಜಿ. ಸೋಮಯ್ಯ ನವರು IAS ಪರೀಕ್ಷೆಗೆ ಅರ್ಜಿಯನ್ನು ಭರ್ತಿ ಮಾಡುವಾಗ ಪ್ರಾಮಾಣಿಕವಾಗಿ ಬರೆದ ಒಂದು ವಿಷಯವು ಅವರ ಸಂದರ್ಶನದ ಸಮಯದಲ್ಲಿ ಯಾವ ರೀತಿಯ ಫಲಿತಾಂಶವನ್ನು ನೀಡಿತು. ಶ್ರೀ ಸಿ.ಜಿ. ಸೋಮಯ್ಯನವರು ನಮ್ಮ ಕರ್ನಾಟಕದವರು ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

ಪ್ರಿಯ ಓದುಗರೆ, ಪ್ರಾಮಾಣಿಕತೆ ಎಂಬುದು ಕೇವಲ ದಾರ್ಶನಿಕರು ತಮ್ಮದಾಗಿಸಿಕೊಳ್ಳಬೇಕಾದ ಸ್ವತ್ತಲ್ಲ. ಅಥವಾ ಗಾಂಧಿ. ಬುದ್ಧ, ಬಸವಣ್ಣ ಮುಂತಾದವರ ಜೀವನಕ್ಕೆ ಮಾತ್ರ ಸಂಬಂಧಪಟ್ಟಿದ್ದಲ್ಲ. ನಮ್ಮ ಸಂಬಂಧಗಳ ನಡುವೆ, ನಮ್ಮ ನಡೆ–ನುಡಿ, ಆಚಾರಗಳ ಒಳಗೆ ರೂಪಿಸಿಕೊಳ್ಳಬೇಕಾದ ವಿಷಯ.

## ಅನಿಸಿಕೆಗಳು



### ತುಂಬಾ ಹೆಮ್ಮೆ

* ಸ್ವಾಯತ್ತತೆ, ಸ್ವಯಂ ಆಡಳಿತಕ್ಕೆ ಸ್ವಯಂ ನಿಯಂತ್ರಣ, ನಿಮ್ಮ ಧ್ಯೇಯಕ್ಕೆ ನಿಮ್ಮ ಬೆಂಬಲದ ಅಭಿಮಾನಿ.

ಸ್ವಾಭಿಮಾನಿ ಸಹಕಾರಿ.ಪತ್ರಿಕೆಯ ಪ್ರಕಟವಾಗುವ, ರೂಪರೇಷಗಳು ತುಂಬಾ ಚೆನ್ನಾಗಿ ಬರುತಿದ್ದು, ಕರ್ನಾಟಕದ ಜನತೆಯ ಪರವಾಗಿ ಧನ್ಯವಾದಗಳು. ಕೋಟಿ, ಕೋಟಿ ಜನರು, ಸ್ವಾಭಿಮಾನಿ ಸಹಕಾರಿಗೆ ಸಧಸ್ಯರಾಗಲಿ ನಿಮ್ಮ ಪತ್ರಿಕೆಗೆ ಒಳ್ಳೆ ಆಡಳಿತಕ್ಕೆ ಸ್ವಾಯತ್ತತೆಗೆ, ಚಳುವಳಿಯ ಅಭಿವೃದ್ಧಿಗೆ ಸದಾ ನಾವು ಕೋಟಿ ಜನರ ಪರವಾಗಿ ಬೆಂಬಲಿಸುತ್ತೇವೆ. ಸರಕಾರದ ಆಡಳಿತದ ಬಗ್ಗೆ ತುಂಬಾ ಹೆಮ್ಮೆ ಇದ್ದು ಇನ್ನು ಹೆಚ್ಚಿನ ಅಭಿವೃದ್ಧಿಗೆ ಆದ್ಯತೆ ಕೊಡಲಿ ಎಂದು ಪತ್ರಿಕೆಯ ಪರವಾಗಿ ವಿಣಣತಿಸಿಕೊಳ್ಳುತ್ತೇನೆ.

**–ಮಂಜುನಾಥ್ ಎನ್, ಅಪೂರ್ವ ಡೆನ್ಸ್ (ರಿ), ಕಾರ್ಯದರ್ಶಿ – ಹುಬ್ಬಳ್ಳಿ**

### ಮೆಚ್ಚುವಂತದ್ದು

* ಸ್ವಾಭಿಮಾನಿ ಸಹಕಾರಿ ಯು ಪ್ರತಿಬಾರಿಯೂ ತನ್ನದೇಯಾದ ನವನವೀನವಾಗಿ ಸಂದರ್ಭಾನುಸಾರವಾಗಿ ಪ್ರಮುಖವಾದ ಮುಖಪುಟಗಳ ಮುದ್ರಿತ ಚಿತ್ರಗಳು, ಆಕರ್ಷಿತವಾಗಿ ಕಲೆಯಾಗಿ ಸದಾ ನೆಲೆಯಾಗಿ ತನ್ನ ತನವನ್ನು ಉಳಿಸಿ, ಬೆಳಸಿಲಿ, ಸದಾ ಸೂರ್ಯ ಸ್ವ ಪ್ರಕಾಶವಾಗಿ ತಿಳಿಮಂಜಿನ ವಜ್ರದ ಹೊಳಪಾಗಿ ಜಾಗ್ರತ ಗೊಳಿಸುವ ಹಾಗೂ ವಿವಿಧ ಮಾರ್ಪಾಡುಗಳನ್ನು ತರುವ ಸೌಹಾರ್ದ ಮೆರಗು, ಕಾರ್ಯತತ್ಪರತೆ, ಅನೇಕ ವಿಷಯ ಪ್ರಸ್ತಾವನೆ ಒಳಗೊಂಡ ಚಿಂತನವಾಗಿದೆ.ಪ್ರತಿ ಮಆಹೆಯಾನ ಪ್ರಕಟಿಸುವ ಮಾಹೆಯಾನ ಪ್ರಕಟಿಸುವ ಸುವ್ಯವಸ್ಥೆ ಕುಡ ಮೆಚ್ಚುವಂತಾದ್ದು. ಲೇಖನಗಳಲ್ಲಿ ತಿಳಿಸುವ ಸೂಚಿತ ಸಲಹೆಗಳು, ಮಾರ್ಗದರ್ಸನ ತುಮಬಾ ಸಹಕಾರದ ಛಾಯೆಯನ್ನು ಪರಾನರ್ಶಿಸುವಂತೆ ದಕ್ಷ ಹಾಗೂ ನವೀಕೃತ ಮಾದರಿಯ ವಿಷಯಗಳ ಕಡೆಗೆ ತುಂಬಾ ಆದ್ಯತೆ ಕೊಡುವ ಪರಂಪರೆ ಕೂಡಾ ಪತ್ರಕೆ ಕ್ರಯಾ ಸಮಿತಿ ಹೊಂದಿದೆ.

**– ಶ್ರೀ ಚನ್ನಬಸವರಾಜ ವೀರಪ್ಪ ಐಹೊಳ್ಳಿ ಶೆಟ್ಟಿ ಮುಕಾನಿ. ವಿಜಾಪುರ.**

# ಸಾಲ ಪಡೆಯುವುದರ ಜೊತೆಗೆ ಮರು ಪಾವತಿಯೂ ಪ್ರತಿಯೊಬ್ಬರ ಕರ್ತವ್ಯ



ದಿ: 15-09-2011ರಂದು ಭದ್ರಾವತಿ ನಗರದ ವಿಶ್ವೇಶ್ವರಯ್ಯ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ನ್ಯೂಟೌನ್‌ನ ಮಾತೃಶ್ರೀ ಆವರಣದಲ್ಲಿ ಏರ್ಪಡಿಸಲಾಗಿದ್ದ ಸಂಸ್ಥೆಯ ಸದಸ್ಯರಿಗೆ ಬಾಂಡ್ ಹಾಗೂ ಗುರುತಿನ ಚೀಟಿ ವಿತರಣೆ ಹಾಗೂ ಸರ್ ಎಂ.ವಿಶ್ವೇಶ್ವರಯ್ಯನವರ 151ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಸೌಹಾರ್ದ ಸಹಕಾರಿ ನಿಯಮಿತಕ್ಕೆ ತನ್ನದೇ ಆದ ನಿಯಮಗಳಿದ್ದು, ಬ್ರಿಟಿಷರ ಕಾಲದಿಂದಲೂ ಆ ನಿಯಮಗಳು ಚಾಚು ತಪ್ಪದೇ ಬರುತ್ತಿವೆ. ಸಾಲ ಪಡೆದುಕೊಂಡವರು ಸಂಸ್ಥೆಗೆ ಕೃತಜ್ಞರಾಗುವುದರ ಜೊತೆಗೆ ಸಾಲ ಮರುಪಾವತಿಯು ತಮ್ಮ ಆದ್ಯ ಕರ್ತವ್ಯವೆಂದು ಭಾವಿಸಬೇಕು ಎಂದು ತಮ್ಮ ಭಾಷಣದಲ್ಲಿ ತಿಳಿಸಿದರು.

ಬಾಂಡ್ ವಿತರಣೆ ಮಾಡಿದ ಭದ್ರಾವತಿ ಕ್ಷೇತ್ರ ಮಾಜಿ ಎಂ.ಜೆ. ಅಪ್ಪಾಜಿ ಮಾತನಾಡುತ್ತಾ ಬಡವರು ಹಾಗೂ ಮಧ್ಯಮ ವರ್ಗದವರಿಗೆ ಸಹಕಾರಿ ನಿಯಮವು ಹೆಚ್ಚು ಅನುಕೂಲಕರವಾಗಿದೆ ಹಾಗೂ ಸಹಕಾರಿ ಸಂಘಗಳ ಸದುಪಯೋಗ ಮಾಡಿಕೊಂಡು ಬಡ ಹಾಗೂ ಮಧ್ಯಮದ ಕುಟುಂಬದವರು ಸದೃಢರಾಗಬೇಕೆಂದು ಕರೆ ನೀಡಿದರು. ಕಾರ್ಯಾಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಸಿದ್ದಲಿಂಗಯ್ಯನವರು ವಹಿಸಿದ್ದರು, ಹಾಗೂ ಶ್ರೀ ಬಾಬು,ಕೆ.ಈಶ್ವರಾ ಚಾರಿ ಇವರು ಸೌಹಾರ್ದ ಸಹಕಾರಿಯೂ ನೂರು ಕಾಲ ಬಾಳಲಿ ಎಂದು ಹಾರೈಸಿದರು.ಶ್ರೀಮತಿ ಮಂಜುಳಾ ನಂಜುಂಡಪ್ಪರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ನಿರ್ದೇಶಕರಾದ ಎಂ. ರಾಮಚಂದ್ರ ಸ್ವಾಗತಿಸಿದರು. ನಗರಸಭಾ ಸದಸ್ಯ ಹಾಗೂ ವಿಶ್ವೇಶ್ವರಯ್ಯ ವಿವಿದೋದ್ದೇಶ ಸೌಹಾರ್ದ ಸಹಕಾರಿ ಉಪಾಧ್ಯಕ್ಷರು ಆದ ಜಿ.ಡಿ.ನಟರಾಜ್ ಪ್ರಾಸ್ತಾವಿಕ ಭಾಷಣ ಮಾಡಿದರು. ನಿರ್ದೇಶಕ ಎಸ್.ವಾಗೀಶ್ ವಂದಿಸಿದರೆ, ಸುಬ್ರಮಣ್ಯ ಶರ್ಮ ನಿರೂಪಣೆ ನಡೆಸಿಕೊಟ್ಟರು.

# ಮಂಗಳೂರು ಸೌಹಾರ್ದ ಸಹಕಾರಿಯ ಪ್ರಥಮ ಮಹಾಸಭೆ




**ಮಂಗಳೂರು:** ಮಂಗಳೂರು ಸೌಹಾರ್ದ ಸಹಕಾರಿ ನಿ., 2010-1011ನೇ ಸಾಲಿನ ಪ್ರಥಮ ಮಹಾಸಭೆ, ಇತ್ತೇಚೆಗೆ ಜಪ್ಪು ಮಂಗಳೂರು ಸ್ಟೋರ್ ಬಳಿ ಕಛೇರಿ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ನಮ್ಮೊಂದಿಗೆ ಸಹಕರಿಸಿದ ಎಫ್.ಡಿ, ಎಸ್.ಬಿ, ಸೌಹಾರ್ದ ಗೃಹಲಕ್ಷ್ಮಿ, ಸೌಹಾರ್ದ ನಿತ್ಯನಿಧಿ, ಗೃಹಸಾಲ, ವ್ಯಾಪಾರ, ವ್ಯವಹಾರ ಸಾಲ, ವಿಧ್ಯಾಭ್ಯಾಸ ಸಾಲ, ವಾಹನ ಸಾಲದ 3 ಪ್ರಮುಖ ಗ್ರಾಹಕರನ್ನು, ಅವಧಿಗಿಂತ ಮೊದಲೇ ಸಾಲ ಮುಕ್ತಾಯ ಮಾಡಿದ 3 ಗ್ರಾಹಕರನ್ನು, 2 ನಿತ್ಯನಿಧಿ ಸಂಗ್ರಹಕರನ್ನು, ಸಭೆಯಲ್ಲಿ ಭಾಗವಹಿಸಿದ 3 ಲಕ್ಕಿ ಡ್ರಾ ನೆನಪಿನ ಕಾಣಿಕೆ ನೀಡಲಾಯಿತು.

ನಮ್ಮ ಸಹಕಾರಿಯ ಎಲ್ಲಾ ಅಭಿವೃದ್ಧಿಗೆ ಸಹಕರಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು, ಡಿ.ಮಂಜುನಾಥ ಸಲಹೆಗಾರರಾಗಿ, ಲೆಕ್ಕ ಪರಿಶೋಧಕರಾದ ಸುಜಯ.ಡಿ ಆಳ್ವಾ ಕಾನೂನು ಸಲಹೆಗಾರರಾದ ವ್ಮರಿಯಮ್ಮ ಥೋಮಸ್, ಎನ್.ಜಿ. ಗಿರೀಶ್ ಅಡ್ವೋಕೇಟ್, ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಕೊಡಿಯಲ್ ಬೈಲ್, ವಿಜಯ ಬ್ಯಾಂಕ್ ಜಪ್ಪು ಶಾಖೆ ಇವರ ಸೇವೆಯನ್ನು ಸಭೆಯಲ್ಲಿ ನೆನಪಿಸಿ ಅಭಿನಂದಿಸಲಾಯಿತು. ಕಾರ್ಪೊರೇಟರ್ ವೆಂಕಟೇಶ್ ಆಚಾರ್, ನಾರಾಯಣ ಶೆಟ್ಟಿ, ಭುಜಂಗ ರಾವ್, ರಾಘುನಾಥ ರೈ ಚರ್ಚೆಯಲ್ಲಿ ಭಾಗ ವಹಿಸಿ ಕೆಲ ಸಲಹೆಗಳನ್ನು ನೀಡಿದರು. ಉಪಾಧ್ಯಕ್ಷಾರಾದ ಪಿ.ನಾರಾಯಣ ಆಳ್ವ, ನಿರ್ದೇಶಕರಾದ ಕೆ. ಹರೀಶ್, ಆಸ್ಟೀನ ಜಯಕರ್, ಎ.ಕೃಷ್ಣ ಭಟ್, ಕೆ.ಎಸ್.ಗಿರೀಶ್, ಜೆ. ಪುಂಡಲೀಕ್ ಸುವರ್ಣ, ಶ್ರೀಮತಿ ಶೋಭರಾಣಿ ಭಾಗವಹಿಸಿದ್ದರು.

## ಶ್ರೀ ಗುರು ಸೌಹಾದ್ ಸಹಕಾರಿಯ ವಾರ್ಷಿಕ ಸಭೆ : ಶೇ.10 ಡಿವಿಡೆಂಡ್ ಘೋಷಣೆ



ಮಂಗಳೂರಿನ ಶ್ರೀ ಗುರು ಸೌಹಾದ್ ಸಹಕಾರಿಯ 2010-11 4ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 24-09-2011ರಂದು ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸುಮಲತ ಎನ್.ಸುವರ್ಣ ಇವರಅಧ್ಯಕ್ಷತೆಯಲ್ಲಿ ಕುದ್ರೋಳಿ ನಾರಾಯಣ ಗುರು ಕಾಲೇಜಿನ ದಾಮೋದರ ಆರ್.ಸುವರ್ಣ ಸಭಾಂಗಣದಲ್ಲಿ ಜರುಗಿತು. ಸಹಕಾರಿಯಲ್ಲಿ ಇನ್ನು ಹೆಚ್ಚಿನ ಠೇವಣಿ ಪಾಲು ಬಂಡವಾಳ ಹಾಗೂ ಸಾಲ ವಿಲೇವಾರಿ ಮಾಡಿ ವ್ಯವಹಾರವನ್ನು ಹೆಚ್ಚಿಸಲು ತೀರ್ಮಾನಿಸಲಾಯಿತು.



ಸವದತ್ತಿಯ ಶ್ರೀ ವೀರಭದ್ರೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಗಮದಲ್ಲಿ ವಾರ್ಷಿಕ ಸರ್ವ ಸಾಧಾರಣ ಸಭೆ ಯಶಸ್ವಿಯಾಗಿ ಜರುಗಿತು.

# ಸೌಹಾರ್ದ ಸಹಕಾರಿಯ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳ ಒಂದು ದಿನದ ಕಾರ್ಯಾಗಾರ

**ಮಂಗಳೂರು:** ದಿನಾಂಕ: 12–10–2011 ಬುಧವಾರ, ಬ್ಯಾಂಕಿನ ಸಭಾಂಗಣ, ಲೈಟ್ ಹೌಸ್ ಹಿಲ್ ರಸ್ತೆ, ಹಂಪನಕಟ್ಟೆ, ಮಂಗಳೂರು ಇಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ನಿಯಮಿತ ಮಂಗಳೂರು, ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಪುತ್ತೂರು, ಇವರ ಸಂಯುಕ್ತಾಶ್ರಯದಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಶ್ರೀ ಎಸ್.ಆರ್.ಸತೀಶ್ಚಂದ್ರರವರು ಕಾರ್ಯಕ್ರಮ ಉದ್ಘಾಟಿಸಿ, ಸಹಕಾರಿಗಳು ಅಳವಡಿಸಿ ಕೊಳ್ಳಬಹುದಾದಂತ ಇತರ ಸೌಲಭ್ಯಗಳ ಬಗ್ಗೆ ಬೆಳಕು ಚೆಲ್ಲಿ ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಸಲಹೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದ.ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ನಿಯಮಿತ ಮಂಗಳೂರು ಇದರ ನಿರ್ದೇಶಕರಾದ ಶ್ರೀ ವಾಸುದೇವ ಬೋಳೂರು ವಹಿಸಿ, ಸಮಯೋಚಿತವಾಗಿ ಮಾತನಾಡಿದರು. ನಂತರ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರೊಂದಿಗೆ ಪ್ರಶ್ನೋತ್ತರ ಸಂವಾದ ಕಾರ್ಯಕ್ರಮ ನಡೆಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಬಳ್ಳಾರಿಯ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ ಕುಲಸಚಿವರಾದ ಶ್ರೀ ಡಾ॥ಯಶವಂತ ಡೋಂಗ್ರೆರವರು




'ಸಹಕಾರಿಗಳ ಸವಾಲುಗಳು ಮತ್ತು ಪರಿಹಾರಗಳು' ಎಂಬ ವಿಷಯದ ಮೇಲೆ ತರಬೇತಿ ನೀಡಿದರು. ಮತ್ತೋರ್ವ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಶ್ರೀ ಬಿ.ಕೆ.ಸಲೀಂರವರು "ಸಾಲ ಪತ್ರಗಳು ಹಾಗೂ ವಸೂಲಾತಿ" ಎಂಬ ವಿಷಯದ ಬಗ್ಗೆ ಮಾಹಿತಿ ನೀಡಿದರು. ದ. ಕನ್ನಡ ಹಾಗೂ ಉಡುಪಿ ಜಿಲ್ಲೆಯ ಸುಮಾರು 35ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಕಾರ್ಯಾಗಾರದಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕ ಶ್ರೀ ಭಾಸ್ಕರ ಕಾಮತ್, ದ.ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸಾವಿತ್ರಿ ರೈ ಹಾಗೂ ಪುತ್ತೂರಿನ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತ ಎ. ಇತರರು ಉಪಸ್ಥಿತರಿದ್ದರು.

# ನಷ್ಟದಲ್ಲಿರುವ ಸೌಹಾರ್ದ ಸಹಕ

## ಉತ್ತಮ ಹಣಕಾಸಿನ ನಿರ್ವಹಣೆಯಿಂದ



ಸೌಹಾರ್ದ ಸಹಕಾರಿಗಳು ಹೆಚ್ಚಾಗಿ ಕ್ರೆಡಿಟ್ ಕಾರ್ಯವನ್ನು ನಿರ್ವಹಿಸುತ್ತಿವೆ. ಹಾಗಾಗಿ ನಷ್ಟದಲ್ಲಿ ಬರಲು ಅವಕಾಶವೇ ಇರುವುದಿಲ್ಲ. ಆದರೆ ಉತ್ತಮ ಹಣಕಾಸಿನ ನಿರ್ವಹಣೆಯಿಲ್ಲದಿದ್ದರೆ ನಷ್ಟವಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಸಹಕಾರ ಸಂಘಗಳ ಜಂಟಿ ನಿಬಂಧರಾದ ಶ್ರೀ ಕೆ.ಎಸ್. ನವೀನ್‌ರವರು ಎಚ್ಚರಿಸಿದರು.

ಅ. 17ರಂದು ಬೆಂಗಳೂರಿನ ಪಟ್ಟಣ ಸಹಕಾರ ಬ್ಯಾಂಕ್‌ಗಳ ಮಹಾಮಂಡಳದ ಕೆ.ಹೆಚ್.ಪಾಟೀಲ್ ಸಭಾಂಗಣದಲ್ಲಿ ರಾಜ್ಯದಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ತರಬೇತಿಯಲ್ಲಿ ಉತ್ತಮ ಹಣಕಾಸಿನ ನಿರ್ವಹಣೆ ಹಾಗೂ ಬಡ್ಡಿಯೇತರ ಆದಾಯ ಸಂಗ್ರಹಣೆಯ ವಿಧಾನಗಳ ಬಗ್ಗೆ ತರಬೇತಿ ನೀಡಲು ವ್ಯವಸ್ಥೆ ಮಾಡಿರುವುದು ಶ್ಲಾಘನೀಯ ಎಂದರು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರುವ ಸಂಯುಕ್ತ ಸಹಕಾರಿಯು ನಷ್ಟದಲ್ಲಿ ರುವ ಸೌಹಾರ್ದ ಸಹಕಾರಿಗಳ ಆರೋಗ್ಯಕರ ಬೆಳವಣಿಗಾಗಿ ಹಮ್ಮಿಕೊಂಡಿರುವ ತರಬೇತಿ ಕಾರ್ಯಾಗಾರ ಒಂದು ಉತ್ತಮ ಕಾರ್ಯ ಎಂದು ಅಭಿಪ್ರಾಯಿಸಿದರು.

ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳನ್ನು ತುಂಬ ಉತ್ತಮವಾಗಿ ಸಂಘಟಿಸಿ, ನಡೆಸಲಾಗುತ್ತಿದೆ. ಇದರ ಸದುಪಯೋಗವನ್ನು ಪಡೆಯಬೇಕೆಂದು ತಿಳಿಸಿದರು.

### ವರ್ಷಾಂತ್ಯಕ್ಕೆ ಲಾಭಗಳಿಸುವ ಗುರಿ ಸಾಧಿಸಿ – ಎಸ್.ಆರ್. ಸತೀಶ್‌ಚಂದ್ರ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ರಾಜ್ಯದಲ್ಲಿ 1800ಕ್ಕೆ ಸೌಹಾರ್ದ ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದು, ಇದರಲ್ಲಿ 200ಕ್ಕೆ ಹೆಚ್ಚು ಸಹಕಾರಿಗಳು ನಷ್ಟದಲ್ಲಿರುವುದು ಸಂಯುಕ್ತ ಸಹಕಾರಿಯು ಕಳವಳಗೊಳ್ಳುವಂತಾಗಿದೆ. ಸಹಕಾರಿಗಳು ಉತ್ತಮ ಆಡಳಿತ ನಿರ್ವಹಣೆ

# ಸಂಯುಕ್ತ ಸಹಕಾರಿಗೆ ಬೆಳಗಾವಿಯಲ್ಲಿ ನಿವೇಶನ : ಶ್ರೀ ಬಾಳಸಾಹೇಬ ಕಂಗ್ರಾಳಕರ್



ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಉತ್ತಮ ಭವಿಷ್ಯವಿದ್ದು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಉತ್ತಮ ತರಬೇತಿ ಕಾಯಕ್ರಮಗಳು ನಡೆಯುತ್ತಿವೆ; ತರಬೇತಿ ಕಾರ್ಯಕ್ರಮ ನಡೆಸಲು ಸಂಯುಕ್ತ ಸಹಕಾರಿಗೆ ಅಗತ್ಯವಾದ ನಿವೇಶನವನ್ನು ಬೆಂಗಳೂರು ಡೆವಲಪಮೆಂಟ್ ಅಥಾರಿಟಿಯ ವತಿಯಿಂದ ಕೊಡಿಸುವುದಾಗಿ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಶ್ರೀ ಬಾಳಸಾಹೇಬ ಕಂಗ್ರಾಳಕರ್ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೆಳಗಾವಿಯಲ್ಲಿ ಆಯೋಜಿಸಿದ್ದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಣಾಧಿಕಾರಿ ಹಾಗೂ ಹಿರಿಯ ಅಧಿಕಾರಿಗಳಿಗಾಗಿ ಸಾಲ ಪತ್ರ ದಾಖಲಾತಿ ಹಾಗೂ ಸಾಲ ವಸೂಲಾತಿ ಕ್ರಮಗಳ ತರಬೇತಿ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರ್ ಮಾತನಾಡಿ, ಸಹಕಾರಿಗಳ ಗುಣಮಟ್ಟ ಸುಧಾರಣೆಗೆ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯ ವತಿಯಿಂದ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ಬಿ.ಎಸ್. ಸುಲ್ತಾನಪುರಿಯವರು, ಬೆಳಗಾವಿ ಜಿಲ್ಲೆಯಲ್ಲಿ ಹೆಚ್ಚಿನ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಸಂಯುಕ್ತ ಸಹಕಾರಿಗಳು ಭಾಗವಹಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು.

**ಬೆಳಗಾವಿಯಲ್ಲಿ ಹೆಚ್ಚಿನ ತರಬೇತಿ ಶಿಬಿರ ಹಮ್ಮಿಕೊಳ್ಳಲು ಒತ್ತಾಯ :** ಇದೇ ಸಂದರ್ಭದಲ್ಲಿ ಹಿರಿಯ ಸಹಕಾರಿ ಶ್ರೀ ಮುತಾಲಿಕ ದೇಸಾಯಿ ಮಾತನಾಡಿ, ಸಹಕಾರಿ ಚಳುವಳಿಗೆ 1 ಶತಮಾನದ ಇತಿಹಾಸವಿರುವ ಭಾರತದಲ್ಲಿ 6 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು 26 ಕೋಟಿ ಸದಸ್ಯ ಬಳಗವನ್ನು ಹೊಂದಿದೆ. ಕರ್ನಾಟಕದಲ್ಲಿ 36 ಸಹಕಾರಿ ಸಂಸ್ಥೆಗಳು 2 ಕೋಟಿಗೂ ಹೆಚ್ಚು ಸದಸ್ಯರನ್ನು ಹೊಂದಿದ್ದು, ಸೌಹಾರ್ದ ಸಹಕಾರಿ ಕ್ಷೇತ್ರ ಜಾರಿಗೆ ಬಂದ 10ವರ್ಷಗಳಲ್ಲಿ ರಾಜ್ಯದಲ್ಲಿ 1800ಕ್ಕೂ ಹೆಚ್ಚು ಸಹಕಾರಿಗಳು ಕಾರ್ಯವಿರ್ವಹಿಸುತ್ತಿದ್ದು ಬೆಳಗಾವಿಯಲ್ಲಿ 800ಕ್ಕೂ ಹೆಚ್ಚು ಸಹಕಾರಿಗಳು ಕಾರ್ಯನಿರ್ವಹಿಸುತ್ತಿರುವುದು ಸಂತೋಷದ ವಿಷಯ. ಸಂಯುಕ್ತ ಸಹಕಾರಿಯವರು ಈ ಸೌಹಾರ್ದ ಸಹಕಾರಿಗಳ ಆರೋಗ್ಯಕರ ಬೆಳವಣಿಗೆಗಾಗಿ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ ಎಂದರು.

ಪ್ರಾರಂಭದಲ್ಲಿ ಶ್ರೀಮತಿ ರತ್ನರವರಿಂದ ಪ್ರಾರ್ಥನೆ ನಂತರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಸಂಯುಕ್ತ ಸಹಕಾರಿಯ ಕಛೇರಿ ಹಾಗೂ ತರಬೇತಿ ಕೇಂದ್ರಕ್ಕೆ ಸ್ಥಳ ಒದಗಿಸಲು ಮನವಿ.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಿ ಅಧ್ಯಕ್ಷರಾದ ಶ್ರೀ ಬಾಳಾಸಾಹೇಬ ಕಂಗ್ರಾಳಕರರವರಿಗೆ ಮನವಿಯನ್ನು ಸಲ್ಲಿಸಿ ಸಂಯುಕ್ತ ಸಹಕಾರಿಯ ಕಛೇರಿಗೆ ಹಾಗೂ ತರಬೇತಿ ಕೇಂದ್ರಕ್ಕಾಗಿ ಅಗತ್ಯವಾಗಿರುವ ಸ್ಥಳವನ್ನು ಒದಗಿಸಬೇಕೆಂದು ಮನವಿ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ 125 ಸೌಹರ್ದ ಸಹಕಾರಿಗಳಿಂದ 225 ಪ್ರತಿನಿಧಿಗಳು ಭಾಗವಹಿಸಿದರು.

# ರಿಗಳ ತರಬೇತಿ ಕಾರ್ಯಾಗಾರ

## ಲಾಭ ಗಳಿಕೆ ಸಾಧ್ಯ – ಕೆ.ಎಸ್. ನವೀನ್



ಮಾಡಿದ್ದೆ ಆದರೆ ಯಾವ ಸಹಕಾರಿಯೂ ನಷ್ಟದಲ್ಲಿ ಬರಲು ಅವಕಾಶವಾಗುವುದಿಲ್ಲ ಹಣಕಾಸಿನ ನಿರ್ವಹಣೆಗೆ ಹೆಚ್ಚಿನ ಪ್ರಾಮೂಖ್ಯತೆ ನೀಡ ಬೇಕಾಗುತ್ತದೆ. ಬಡ್ಡಿಯೇತರ ಆದಾಯಗಳ ಸಂಗ್ರಹಣೆಗೆ ಆದ್ಯತೆ ಅವಶ್ಯಕ ಎಂದು ತಿಳಿಸುತಾ, ನಷ್ಟದಲ್ಲಿರುವ ಎಲ್ಲಿ ಸಹಕಾರಿಗಳು ವರ್ಷಾಂತ್ಯಕ್ಕೆ ಲಾಭಗಳಿಸುವ ಗುರಿ ಹೊಂದಬೇಕೆಂದು ಕರೆ ನೀಡಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಮಾತನಾಡಿ, ಸೌಹಾರ್ದ ಸಹಕಾರಿಗಳು ಲಾಭಗಳಿಸಲು ಹತ್ತಾರು ವಿಧದ ಬಡ್ಡಿಯೇತರ ಆದಾಯಗಳ ಸಂಗ್ರಹಣೆಗೆ ಅವಕಾಶವಿದೆ. ಸಹಕಾರಿಗಳ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರು ಸಹಕಾರಿಗಳಲ್ಲಿ ನಷ್ಟವಾಗುವುದಿಲ್ಲ ಎಂದರು. ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನ, ಶ್ರೀಮತಿ ಮಂಜುಳಾ ಪಾಟೀಲ, ಶ್ರೀ ಭಾಸ್ಕರಕಾಮತ್, ಶ್ರೀ ಸಣ್ಣಸೂಗಪ್ಪ ಶ್ರೀ ವೈ.ಟಿ.ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು.

ಸೌಹಾರ್ದ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರ್ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ 65 ಸೌಹಾರ್ದ ಸಹಕಾರಿಗಳಿಂದ 84 ಪ್ರತಿನಿಧಿಗಳು ಭಾಗವಹಿಸಿದ್ದರು.

ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹಾಗೂ ಶ್ರೀ ಐ.ಎನ್.ಜಿ.ವೈಶ್ಯ ಬ್ಯಾಂಕಿನ ತರಬೇತಿ ಅಧಿಕಾರಿ ಶ್ರೀ ಹೆಚ್.ಮುರಲಿಧರ ರವರು ಸೌಹಾರ್ದ ಸಹಕಾರಿಗಳ ಲಾಭಗಳಿಕೆಗಾಗಿ ಕ್ರೀಯಾ ಯೋಜನೆ, ನಷ್ಟಕ್ಕೆ ಕಾರಣಗಳು ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಇ–ಸ್ಟಾಂಪಿಂಗ್ ಅಧಿಕಾರಿಗಳು ಮವೆಸ್ಟರ್ನ ಮನಿಅಧಿಕಾರಿಗಳು ಹಾಗೂ ವಿಮಾ ಕಂಪನಿ ಅಧಿಕಾರಿಗಳು ವಿವಿಧ ಯೋಜನೆಗಳ ಅನುಷ್ಠಾನದ ಬಗ್ಗೆ ವಿವರಣೆ ನೀಡಿದರು.